ಅಚಲ

ಜನವರಿ 1993 ಬೆಲೆ ರೂ. 1-50



ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

"ಅಚಲ" ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹದಿನಾರು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು, ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಪುಸ್ತಕ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, 1ನೇ ಮೇನ್, 11ನೇ ಕ್ರಾಸ್ ವ್ಯೆಯಾಲಿ ಕಾವಲ್
ಬೆಂಗಳೂರು–560 003.

ಚಂದಾ ವಿವರ

ವಾರ್ಷಿಕ ಚಂದಾ	:	ರೂ. 15–00
ಬಿಡಿ ಪ್ರತಿ	:	ರೂ. 1–50
ವಿಶೇಷ ಪ್ರತಿ	:	ರೂ. 5–00
ಆಜೀವ ಚಂದಾ		
ವ್ಯಕ್ತಿಗಳಿಗೆ	:	ರೂ. 150–00
ಸಂಸ್ಥೆಗಳಿಗೆ	:	ರೂ. 200–00

Printed at : PRINTSWELL, 78, 3rd Main Road Nagappa Block, Srirampuram, Bangalore-21 & Published by Dr. G. Ramakrishna on behalf of Jagruthi Mahila Adhyayana Kendra
26, I Main, 11th Cross, Vyalikaval, Bangalore-3
Editor : N. GAYATRI

ಅಭಿನಂದನೆ

ಎಚ್. ಎಸ್. ಪಾರ್ವತಿ

ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಕೊಡುಗೆಗಾಗಿ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗೆ ಆಯ್ಕೆಯಾಗಿರುವ ಖ್ಯಾತ ಲೇಖಕಿ ಶ್ರೀಮತಿ ಎಚ್. ಎಸ್. ಪಾರ್ವತಿ ಅವರಿಗೆ 'ಅಚಲದ' ಅಭಿನಂದನೆಗಳು.

ಡಾ. ಪ್ರತಿಭಾರಾಯ್

ಭಾರತೀಯ ಜ್ಞಾನ ಪೀಠದ ಪ್ರತಿಷ್ಠಿತ ಮೂರ್ತಿದೇವಿ ಪ್ರಶಸ್ತಿಯನ್ನು ಪಡೆದುಕೊಂಡಿರುವ ಒರಿಯಾ ಲೇಖಕಿ ಡಾ. ಪ್ರತಿಭಾರಾಯ್ ಅವರಿಗೆ 'ಅಚಲ'ದ ಅಭಿನಂದನೆಗಳು. 1983 ರಲ್ಲಿ ಈ ಪ್ರಶಸ್ತಿ ಸ್ಥಾಪನೆಯಾದ ಮೇಲೆ ಅದನ್ನು ಪಡೆದ ಪ್ರಥಮ ಮಹಿಳೆ ಶ್ರೀಮತಿ ಪ್ರತಿಭಾರಾಯ್,

ಕೃತಜ್ಞತೆಗಳು

ಅಚಲದ ಹಿತೈಷಿಗಳಲೊಬ್ಬರಾದ ಶ್ರೀ ಎಸ್. ರಾಮಚಂದ್ರರಾವ್ ಅವರು ಪತ್ರಿಕೆಗೆ 3,000 ರೂಪಾಯಿಗಳನ್ನು ನೀಡಿ ನಾವು ಆಯ್ಕೆ ಮಾಡಿದ ಇಪ್ಪತ್ತು ಸಂಸ್ಥೆಗಳಿಗೆ ಪತ್ರಿಕೆಗಳನ್ನು ಕಳುಹಿಸಲು ಸೂಚಿಸಿದ್ದಾರೆ. 'ಅಚಲ'ದ ಪರವಾಗಿ ಅವರಿಗೆ ಕೃತಜ್ಞತೆಗಳು.

'ಅಚಲ'ದ ಬೆಳವಣಿಗೆಗೆ ನಮ್ಮ ಹಿತೈಷಿಗಳು ಹೀಗೆ ಉದಾರವಾಗಿ ಧನ ಸಹಾಯ ಮಾಡಿ ಪ್ರೋತ್ಸಾಹಿಸಬೇಕೆಂದು ವಿನಂತಿ.

ಕೋಮು ಸೌಹಾರ್ದತೆಯತ್ತ ಹೆಜ್ಜೆ...

ಪ್ರಿಯ ಸಂಗಾತಿಗಳೇ,

ಹೊಸ ವರ್ಷದ ಶುಭಾಶಯಗಳು. ಈ ಸಂಚಿಕೆಯೊಂದಿಗೆ ಅಚಲ ತನ್ನ ಎಂಟನೆಯ ವರ್ಷವನ್ನು ಯಶಸ್ವಿಯಾಗಿ ಮುಗಿಸಿ ಒಂಬತ್ತಕ್ಕೆ ಕಾಲಿಡುತ್ತಿದೆ. ಈ ದೀರ್ಘ ಅವಧಿಯಲ್ಲಿ ಹಲವಾರು ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳ ನಡುವೆಯೇ ಪತ್ರಿಕೆ ತನ್ನ ಧ್ಯೇಯೋದ್ದೇಶಗಳಿಂದ ಹಿಂದೆ ಸರಿಯದೆ ಅಚಲವಾಗಿ ನಿಂತು ಮಹಿಳಾ ಜಾಗೃತಿಯ ನಿಟ್ಟಿನಲ್ಲಿ ಹೆಜ್ಜೆಯಿಡುತ್ತಾ ಸಾಗಿದೆ.

ಹೊಸ ವರ್ಷದ ಆರಂಭಕ್ಕೆ ಕಳೆದ ವರ್ಷಗಳ ಕೋಮು ಗಲಭೆಯ ದುಷ್ಕೃತ್ಯಗಳ ಕಪ್ಪು ಛಾಯೆ ಆವರಿಸಿ ನಿಂತಿರುವುದು ಎಂತಹವರಿಗೂ ನೋವಿನ, ಆಘಾತದ ವಿಷಯವಾಗಿದೆ. 1992ರ 6ರ ಅಯೋಧ್ಯಾ ಘಟನೆಯಿಂದಾಗಿ ಸರ್ವ ಧರ್ಮ ಸಮನ್ವಯದ ನಾಡೆಂದು ಹೆಮ್ಮೆಯಿಂದ ಬೀಗುತ್ತಿದ್ದ, ವಿಶ್ವಕ್ಕೆ ಹಂಚುವಷ್ಟು ಆಧ್ಯಾತ್ಮ ಸಂಪತ್ತಿನ ಶ್ರೀಮಂತ ದೇಶವೆಂದು ಬೊಬ್ಬೆಯಿಡುತ್ತಿದ್ದ ಭಾರತ ದೇಶ ಹೇಗೆ ವಿಶ್ವದ ಭೂಪಟದಲ್ಲಿ ಮಸಿಯನ್ನು ಬಳಿದುಕೊಂಡಿತು ಎಂಬುದು ದೇಶಪ್ರೇಮಿಗಳಲ್ಲರನ್ನೂ ನೋವಿಗೀಡು ಮಾಡುವ ಸಂಗತಿ.

ಇಂದಿನ ಸಂದಿಗ್ಧ-ಸಂಕಟಮಯ ಪರಿಸ್ಥಿತಿಯಲ್ಲಿ ತರ್ಕಕ್ಕಿಂತ ಮಾನವೀಯತೆಗೇ ಹೆಚ್ಚು ಆದ್ಯತೆ ಕೊಡಬೇಕಿದೆ. ಮಸೀದಿಯನ್ನು-ಮಂದಿರವನ್ನು ಯಾರು, ಏಕೆ, ಹೇಗೆ ಒಡೆದಿದ್ದಾರೆ ಮತ್ತು ಅದಕ್ಕೆ ಪೂರಕವಾಗಿ ಶಾಸ್ತ್ರಾಧಾರಗಳನ್ನು, ಅಂಕಿ-ಸಂಖ್ಯೆಗಳನ್ನು ಒದಗಿಸುತ್ತಾ ಕುಳಿತು ದುಷ್ಕೃತ್ಯಗಳನ್ನು ಸಮರ್ಥಿಸುವ ಸಮಯ ಇದಲ್ಲ. ಚರಿತ್ರೆಯಿಂದ ಪಾಠ ಕಲಿಯಬೇಕೆ ಹೊರತು ಚರಿತ್ರೆಯ ದುಷ್ಕೃತ್ಯಗಳನ್ನು ಪುನರ್ಘಟಿಸುವಂತೆ ಮಾಡಿ ಪ್ರಗತಿಯ ಹೆಜ್ಜೆಯಿಂದ ಹಿನ್ನಡೆಯು ಬೇಕಿಲ್ಲ.

'ದಯೆಯೇ ಧರ್ಮದ ಮೂಲ'ವೆಂದ ನಾಡಿನಲ್ಲಿ ಮತಾಂಧರ ಅಮಾನವೀಯ ನಡವಳಿಕೆಯಿಂದಾಗಿ 'ದಯೆ' ಯೆಂಬ ಪದ ಅರ್ಥಗೆಟ್ಟಿದೆ, ದುಬಾರಿಯಾಗಿದೆ. ಭಾರತದ ಚರಿತ್ರೆಯ ಇತಿಹಾಸದ ಪುಟಗಳನ್ನು ತಿರುವಿದಾಗ ಈ ರೀತಿಯ ಧಾರ್ಮಿಕ ಸಂಘರ್ಷ, ಬುಡಮೇಲು ಕೃತ್ಯಗಳು ಇದೇ ಮೊದಲಲ್ಲ. ಈ ನೆಲದಲ್ಲಿಯೇ ಹುಟ್ಟಿ ಬೆಳೆದ ಧರ್ಮಗಳಲ್ಲದೆ, ಹೊರಗಿನಿಂದ ಬಂದ ಧರ್ಮಗಳೂ ಈ ನಾಡಿನ ಉಸಿರಲ್ಲಿ ಬೆರೆತು ಹೋಗಿದ್ದರೂ ತಮ್ಮ ತಮ್ಮ ಅಸ್ತಿತ್ವಕ್ಕಾಗಿ ಹೊಡೆದಾಡುತ್ತಲೇ ಬಂದಿವೆ. ಬಹುಮುಖಿ ಸಂಸ್ಕೃತಿಯ ಈ ನಾಡಿನಲ್ಲಿ ಹಿಂದೂ ಸಂಸ್ಕೃತಿ ಬಹು ಸಂಖ್ಯಾತ ಎಂಬ ಒಂದೇ ಕಾರಣಕ್ಕೆ ಗೂಂಡಾಗಿರಿ ಮಾಡುವುದು ಮಾನವೀಯತೆಗಂತೂ ಸಮ್ಮತವಲ್ಲದ ವಿಚಾರ. ಸ್ವತಂತ್ರ ಭಾರತದಲ್ಲಿ ಜಾತ್ಯತೀತ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿದ್ದೇ ಇಂತಹುದೆಲ್ಲ ವೈಮನಸ್ಯಗಳಿಗೆ ಕೊನೆ ಹಾಡುವ ಪ್ರಯತ್ನದಿಂದ. ಆದರೆ ಇಂದು ಭಾರತದಲ್ಲಿ ಜಾತ್ಯತೀತತೆ ವಿಡಂಬನೆಯಾಗಿ ವಿಕಟಾಟ್ಟಹಾಸದಿಂದ ಅಣಕವಾಗಿ ನಿಂತಿದೆ.

ಕೋಮು ಸಂಘಟನೆಗಳನ್ನು ಬಹಿಷ್ಕರಿಸುವುದರಿಂದ ಕೋಮು ಭಾವನೆಯನ್ನು ನಿರ್ನಾಮ ಮಾಡಬಹುದು ಮತ್ತು ಅದರ ಚಟುವಟಿಕೆಗಳನ್ನು ಕುಂಠಿತಗೊಳಿಸಬಹುದೆಂದು ಸರ್ಕಾರ ಭಾವಿಸಿದ್ದರೆ ಅದು ಆತುರದ ಹಾಗೂ ಅವಸರದ ಕ್ರಿಯೆಯಾಗಿ ಉಳಿಯುತ್ತದಷ್ಟೇ. ಸಂವಿಧಾನದಲ್ಲೇ ಮೂಲಭೂತ ಮಾರ್ಪಾಟಾಗದೆ, 'ಜಾತ್ಯತೀತತೆ'ಯ ಹೆಸರಿನಲ್ಲಿ ಎಲ್ಲ ಧರ್ಮಗಳೂ ವಿಜೃಂಭಿಸುವ ಅವಕಾಶವಿದ್ದಾಗ ಮೂಲಭೂತವಾದಿಗಳು ಸಹಜವಾಗಿಯೇ ಕಿತ್ತಾಟದ ಕಣದಲ್ಲಿ ನುಗುತ್ತಾರೆ. ಆಚರಣೆಯ ಹಂತದಲ್ಲಿ ಧರ್ಮ ತನ್ನೆಲ್ಲ ಕ್ರೌರ್ಯದ ಮುಖವಾಡವನ್ನು ಹೊತ್ತು ಸಹನೆ, ಸಾಮರಸ್ಯ, ಸೌಹಾರ್ದತೆಗಳ ಪದಕೋಶವನ್ನೇ ಕಿತ್ತು ಬಿಸಡುತ್ತದೆ. ಆದ್ದರಿಂದಲೇ ದೇಶದ ಉಳಿವಿಗೆ ಮತ್ತು ಪ್ರಗತಿಗೆ ಧರ್ಮ ಖಾಸಗೀಕರಣಕ್ಕೊಳಗಾಗುವುದು ತೀರ ಅವಶ್ಯಕವಾದ ಹಾಗೂ ತುರ್ತಿನ ಅಗತ್ಯವಾಗಿದೆ.

ತಮ್ಮ ರಾಜಕೀಯಕ್ಕಾಗಿ ಅತಿ ಹೀನ ಕೃತ್ಯವನ್ನು ಎಸಗಿರುವ ಕಾವಿಧಾರಿಗಳಂತೆಯೇ ಅವರ ಈ ದುಷ್ಕೃತ್ಯವನ್ನು ನಿಯಂತ್ರಿಸಲಾಗದೇ, ತಮ್ಮ ನಿಷ್ಕ್ರಿಯೆಯಿಂದ ಪ್ರೋತ್ಸಾಹ ನೀಡಿದ ಆಡಳಿತ ಸರ್ಕಾರವೂ ಕೂಡಾ ಇಂದಿನ ಎಲ್ಲಾ ವಿದ್ಯಮಾನಗಳಿಗೆ ಸಮಾನವಾಗಿ ಹೊಣೆಯಾಗಿದೆ. ಅಧಿಕಾರದ ಅಮಲಿನಲ್ಲಿ, ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವ ಹಠದಲ್ಲಿ ಎಂತಹ ನೀಚ ಕೃತ್ಯವನ್ನಾದರೂ ಮಾಡಲು ಮುನ್ನುಗ್ಗುವ ಸ್ವಹಿತಾಸಕ್ತ ರಾಜಕೀಯ ಪಕ್ಷಗಳಿಂದ ದೇಶದ ಜನತೆ ಬಿಡುಗಡೆ ಹೊಂದಬೇಕಿದೆ. ಅದಕ್ಕೆ ತೀವ್ರತರವಾದ ರಾಜಕೀಯ, ಸಾಮಾಜಿಕ ತಿಳುವಳಿಕೆಯು ಮೂಡಬೇಕಿದೆ. ಈ ಜಾಗೃತಿ ಇಂದಿನ ಕಠಿಣ ವಾಸ್ತವಗಳ ಪರಿಜ್ಞಾನದಿಂದ ಮಾತ್ರ ಮಾಡಲು ಸಾಧ್ಯ.

ಇಂದು ಮಂದಿರ–ಮಸೀದಿಯ ಹೆಸರಿನಲ್ಲಿ ಕಟ್ಟಡಗಳನ್ನು ಉರುಳಿಸುತ್ತಿರುವ, ಮನುಷ್ಯತ್ವವನ್ನು ಕೊಲೆಗೈಯುತ್ತಿರುವ ಶಕ್ತಿಗಳನ್ನು ಪ್ರತಿಭಟಿಸುತ್ತಲೇ ನಾವು ನಾಡಿನ ತುರ್ತು ಅಗತ್ಯಗಳಿಗೆ ಗಮನ ಹರಿಸಬೇಕಿದೆ, ಶಾಲೆಗಳು ಆಸ್ಪತ್ರೆಗಳು, ಕಾರ್ಖಾನೆಗಳು, ಇಂದಿನ ನಮ್ಮ ತುರ್ತು ಅಗತ್ಯಗಳಾಗಿವೆ. ಬಡತನ, ಅಜ್ಞಾನ, ಅನಾರೋಗ್ಯದಿಂದ ಬಳಲುತ್ತಿರುವ ಜನತೆಯತ್ತ ದೇಶದ ಕ್ರಿಯಾಶಕ್ತಿ ಗಮನ ಹರಿಸಬೇಕಿದೆ. ನಮ್ಮ ದೇಶದ ಸಾಮಾಜಿಕ–ಆರ್ಥಿಕ ಬದಲಾವಣೆಗೆ ಧಕ್ಕೆ ತರುವಂಥ ಮಂದಿರ–ಮಸೀದಿಯ ಅಮಲಿನಿಂದ ಹೊರಬಂದು ಪ್ರಗತಿಯತ್ತ ದಾಪುಗಾಲು ಹಾಕಬೇಕಿದೆ.

ಐನೂರು ವರ್ಷಗಳ ಹಿಂದೆ ಅನುಭವಿಸಿದೆವೆನ್ನಲಾದ ಅಪಮಾನಕ್ಕೆ ಮಸೀದಿಯನ್ನು ಒಡೆದು ಸೇಡು ತೀರಿಸಿಕೊಳ್ಳಲು ಹೊರಟಿರುವ ಹಿಂದೂವಾದಿಗಳಿಗೆ ಬಹು ಮುಖ್ಯವಾದ ಪ್ರಶ್ನೆಯನ್ನು ಇಂದಿನ ಮಹಿಳಾ ಸಮುದಾಯ ಕೇಳಬೇಕಿದೆ. ಸಾವಿರಾರು ವರ್ಷಗಳಿಂದ ಹೆಣ್ಣನ್ನು ನಿರಂತರ ದಾಸ್ಯಕ್ಕೆ, ಅಪಮಾನಕ್ಕೆ ಗುರಿಯಾಗಿಸಿರುವ ಪುರುಷ ಸಮಾಜದ ವಿರುದ್ಧ ಪ್ರತಿಭಟಿಸಲು ನಾವು ಏನನ್ನು ಒಡೆಯಬೇಕಿದೆ ? ಯಾರ ತಲೆಯನ್ನು ಚೂರು ಮಾಡಬೇಕಾಗಿದೆ ?

ಉತ್ತರಕ್ಕಂತೂ ಮಹಿಳೆಯರು ಮತಾಂಧರತ್ತ ನೋಡುವುದಿಲ್ಲ. ವಸ್ತುಸ್ಥಿತಿಯ ಬೆಳಕಿನಲ್ಲಿ ಅರಿವಿನ ಜ್ಯೋತಿ ಹಿಡಿದು ತನ್ನ ಹಕ್ಕುಗಳಿಗಾಗಿ ಭಾರತೀಯ ಮಹಿಳೆ ಹೋರಾಡಲಿದ್ದಾಳೆ. ಹಾಗೆಯೇ ಸಾಮರಸ್ಯದ, ಸೌಹಾರ್ದದ ಬೀಜ ಮಂತ್ರವನ್ನು ಪ್ರಸರಿಸುವಲ್ಲಿಯೂ ಬಹುಮುಖ್ಯ ಪಾತ್ರವಹಿಸಲಿದ್ದಾಳೆ.

— ಎನ್. ಗಾಯಿತ್ರಿ

ಕ ವ ನ

ಮಾಂಗಲ್ಯ ಭಾಗ್ಯ

ಸಂಜೆ ಮೊಲೆ ಕುಡಿಸುತ್ತಿದ್ದಾಗ
ಕೂಸು ಕೈಹಾಕಿ ಜಗ್ಗಿ
ಅವಳ ಮಂಗಳಸೂತ್ರ ಹರಿಯಿತು.

ಅಯ್ಯೋ ಎಂಥ ಮಾತು !
ಹರಿಯಿತು ಅನ್ನುವುದೇ ?
ನನ್ನ ಮಾಂಗಲ್ಯ ಭಾಗ್ಯವೇ ಹೋದೀತು.
ಕಡಿಮೆಯಾಯಿತು
ಅನ್ನಬೇಕು ಎಂದು ಅವಳಂದದ್ದು
ಕೇಳಿಸಿತೇ ನಿಮಗೆ ?

ಕರಿಮಣಿ ತರಲು ಪೇಟೆಗೆ ಹೋದವಳಿಗೆ
ತಿರುಗಿ ಬರಲು ತುಸು ತಡವಾಗಿ
ಕುಡಿದು ಬಂದ ಗಂಡ
ಅಡಿಗೆಯಿನ್ನೂ ಆಗಿಲ್ಲವೆಂದು
ಅವಳನ್ನು ಚಪಚಪನೆ ಬಡಿದು
ಮಲಗಿ ಗೊರಕೆ ಹೊಡೆದ.

ರಾತ್ರಿ ಮೊಲೆ ಕುಡಿಸುತ್ತಾ
ನಿಧಾನವಾಗಿ ಕರಿಮಣಿ ಪೋಣಿಸುತ್ತ
ಕುಳಿತಿದ್ದಳು ಅವಳು
ಯಾಕೆ ಈ ಮಂಗಲಸೂತ್ರ
ಎಂದು ತನಗೆ ತಾನೇ
ಕೇಳಿಕೊಳ್ಳುತ್ತ.

ನಿತ್ಯ ಸೀತೆ

ಸುತ್ತ ಮುತ್ತಲೂ ಹತ್ತಾರು
ಅಗೋಚರ ಲಕ್ಷ್ಮಣ ರೇಖೆಗಳು
ನಡುವೆ ನೀನು ಸದಾ ಸೀತೆ.
ನಡುವೆ ನೀನು ನಿತ್ಯ ಸೀತೆ
ತಾಯಿ ತಂದೆಯ ರೇಖೆ ಗಂಡ ಮಕ್ಕಳ ರೇಖೆ
ತಾಳಿಯ ರೇಖೆ ಕುಂಕುಮದ ರೇಖೆ
ರೇಖೆಗಳೊಳಗಿನ ಶೀಲದ ರೇಖೆ
ಭವ್ಯ ಸಂಸ್ಕೃತಿಯ ಮಹಾರೇಖೆ
ಮಗಳೂ ನೀನೆ ತಾಯಿಯೂ ನೀನೆ
ಸೊಸೆಯೂ ನೀನೆ ಅತ್ತೆಯೂ ನೀನೆ
ಕಲ್ಲೂ ನೀನೆ ಕವಣೆಯೂ ನೀನೆ
ಗುರಿಹೊಡೆವ ಕೈ ಮಾತ್ರ ನೋಡಬಾರದು ನೀನು
ಗಂಡಿನ ತೋಟದ ಗಿಡ ಗಿಡದಲ್ಲೂ
ಬಣ್ಣ ಬಣ್ಣದ ಹೂವುಗಳು
ಸಾವಿರ ವರುಷ ನೀರುಣಿಸಿ ಬೆಳೆಸಿದ
ಅಂದ ಚಂದದ ಹೂಗಳು.
ಬುದ್ಧಿ ನಿನಗೆ ಮೊಳಕಾಲ ಕೆಳಗೆ
ಚಲುವಿನ ತಿರುಳು ತಿಳಿಯುವುದು ಹೇಗೆ
ಕೀಳುವುದು ಸಲ್ಲ ಹೂವುಗಳನ್ನು
ಕೇಳುವುದು ಸಲ್ಲ ಪ್ರಶ್ನೆಗಳನ್ನು
ಹೂವುಗಳೊಳಗಿ ಗಂಧ ಅರಿಯುತ್ತಾ ಹೋದಂತೆ
ರೇಖೆಗಳಾಚೆಯ ಜಗಕ್ಕೆ ಹೆಜ್ಜೆಯಿಕ್ಕುವ ಧೈರ್ಯ
ಬಂದೀತು ನಿನಗೆ ಗೆಳತಿ ಇಲ್ಲದೆ ಹೋದಲ್ಲಿ
ನೀನು ಸದಾ ಸೀತೆ ನೀನು ನಿತ್ಯ ಸೀತೆ

— ಡಾ॥ ಸಂಜೀವ ಕುಲಕರ್ಣಿ

ಏಡ್ಸ್ ಮತ್ತು ಮಹಿಳೆ

❋ ಚಂದ್ರ

'ಏಡ್ಸ್' ಒಂದು ಮಾರಕ ರೋಗ. ಮನುಕುಲವನ್ನೇ ಧ್ವಂಸ ಮಾಡುವ ಭೀತಿ ಹುಟ್ಟಿಸಿ ಭಾರತಕ್ಕೂ ಕಾಲಿಟ್ಟ ಕಟು ಸಮಸ್ಯೆ ಇದು. ದಶಕದ ಹಿಂದೆ, ದೂರದ ಅಮೆರಿಕೆಯಲ್ಲೆಲ್ಲೋ ಸಲಿಂಗರತಿಯರಿಗೆ ಮಾತ್ರ ತಟ್ಟುವ ಕಾಯಿಲೆ ಎಂದು ನೆಮ್ಮದಿಯಿಂದದ್ದ ಸ್ಥಿತಿ ಇಂದು ಭಾರತದಲ್ಲಿಲ್ಲ. ತಟ್ಟನೆ ಉದ್ಭವಿಸಿ ಹಬ್ಬುತ್ತಿರುವ ಈ ರೋಗ ತನ್ನ ಕಬಂಧ ಬಾಹುಗಳನ್ನು ಚಾಚಿ ನಿಂತಿದೆ. ಇಂದು 11,000 ಕ್ಕೂ ಹೆಚ್ಚಿನ 'ಏಡ್ಸ್' ಪ್ರಕರಣಗಳು ದಾಖಲಾಗಿವೆ. ದಾಖಲಾಗದ ಸಂಖ್ಯೆ ಊಹೆಗೆ ಬಿಟ್ಟಿದ್ದು.

ಲೈಂಗಿಕ ಸಂಬಂಧದ ಮೂಲಕ ರಕ್ತದ ಮೂಲಕ ರಕ್ತದ ಉತ್ಪಾದನೆಗಳ ಮೂಲಕ, ಐ. ವಿ. ಮದ್ದುಗಳ ಮೂಲಕ, ಆರೋಗ್ಯವಂತ ಕುಟುಂಬಗಳಿಗೆ ಕಾಲಿಟ್ಟು ಮಹಿಳೆ–ಮಕ್ಕಳ ಮೇಲೂ ದಾಳಿ ಮಾಡಿರುವ 'ಏಡ್ಸ್', ಜನರ ಅಪ್ಪಟ ಅಜ್ಞಾನದಲ್ಲಿ ಹುಟ್ಟಿ ಹರಡುತ್ತಿದೆ. 'ಏಡ್ಸ್' ಕುರಿತು ಜನಸಾಮಾನ್ಯರಲ್ಲಿ ತಿಳುವಳಿಕೆ ಮೂಡಿಸದಿದ್ದರೆ, 'ಏಡ್ಸ್' ಈ ಶತಮಾನದ ಅತ್ಯಂತ ದುರಂತ ಸಾಂಕ್ರಾಮಿಕ ರೋಗವಾಗಿ ಪರಿಣಮಿಸಬಲ್ಲದು.

'ಏಡ್ಸ್' ಎಂದೊಡನೆ ವೇಶ್ಯಾವೃತ್ತಿ–ಲೈಂಗಿಕ ಸ್ವೇಚ್ಛಾಚಾರ ಎಂದಷ್ಟೇ ಪ್ರಚಾರ ಬಂದು, ಕೆಲವು 'ಏಡ್ಸ್ ವಿಚಾರ ಸಭೆ'ಗಳಲ್ಲಿ ಬಾಂಬೆಯ ಕೆಂಪು ದೀಪದ ಮಹಿಳೆಯರನ್ನೂ ಪ್ರದರ್ಶಿಸಿ, 'ಏಡ್ಸ್'ನ ಸಮಸ್ಯೆಯನ್ನು ಮಹಿಳಾ ಕೇಂದ್ರವಾಗಿರಿಸಿರುವುದು ತೀರಾ ವಿಷಾದನೀಯ. ವೈಶ್ಯಾಗೃಹಗಳಲ್ಲಿ, ತಾವು ದುಡ್ಡು ಕೊಟ್ಟು ಕೊಂಡು ತಂದ ರೋಗವನ್ನು ತಮ್ಮ ಅಜಾಗರೂಕತೆಯಿಂದ ಪುರುಷರು, ಹೆಂಡತಿ–ಮಕ್ಕಳಿಗೆ ಸಾಗಿಸುತ್ತಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ. 'ಏಡ್ಸ್' ಸಮಸ್ಯೆಗೆ ಮಹಿಳೆಯರತ್ತ ಬೊಟ್ಟು ತೋರಿಸುವುದರಲ್ಲಿ ಅರ್ಥವಿಲ್ಲ.

ಅದಲ್ಲದೇ, ಇಂದು ಭಾರತದಲ್ಲಿ ಶೇಕಡಾ 60 ರಷ್ಟು 'ಏಡ್ಸ್', ಲೈಂಗಿಕವಲ್ಲದ ಮೂಲಗಳಿಂದ ಬಂದಿರುವುದಾಗಿದೆ. ಮತ್ತೂ ಆಘಾತದ ವಿಷಯವೆಂದರೆ ವರ್ಷ ವರ್ಷಕ್ಕೂ 'ಏಡ್ಸ್'ಗೆ ಗುರಿಯಾಗುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಕಾರಣ, ಹತ್ತು, ಹಲವು ಬಗೆಯಲ್ಲಿ 'ಏಡ್ಸ್' ಪಡೆದ ಪುರುಷರು, ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಮ್ಮ ರೋಗವನ್ನು ತಮ್ಮ ಪತ್ನಿಯರಿಂದಲೂ ಮುಚ್ಚಿಟ್ಟಿರುವುದಾಗಿ ಹೇಳಿದ್ದಾರೆ. ಹಾಗಿದ್ದೂ ಲೈಂಗಿಕ ಸಂಬಂಧದಲ್ಲಿ ಸುರಕ್ಷಣಾ ವಿಧಾನಗಳನ್ನು ಉಪಯೋಗಿಸಲೂ ನಿರಾಕರಿಸುವವರಿದ್ದಾರೆ. ವಿವಾಹದೊಳಗೆ ಲೈಂಗಿಕ ವಿಷಯಗಳಲ್ಲಿ ಮಹಿಳೆಯರು ಬೇಕು-ಬೇಡಗಳನ್ನು ಗಮನಿಸುವಷ್ಟು ನಮ್ಮ ಸಮಾಜ–ಸಂಪ್ರದಾಯ ತಿಳಿ ಹೇಳದ ಕಾರಣ. ಪುರುಷನ ಇಚ್ಛೆಗೆ ಬಹುಪಾಲು ಪತ್ನಿಯರು ಒಪ್ಪಿಸಿಕೊಳ್ಳುತ್ತಾರೆ. ಸುರಕ್ಷಣಾ ವಿಧಾನಗಳನ್ನು ರೇಜಿಗೆ ಎಂದು ಭಾವಿಸುವ ಪತಿ, ತನ್ನ ರೋಗವನ್ನು ಪತ್ನಿಗೆ, ಪತ್ನಿಯಿಂದ ಮುಂದಿನ ಪೀಳಿಗೆಗೆ ವರ್ಗಾಯಿಸಿರುತ್ತಾನೆ. ಇನ್ನು ದೈಹಿಕ ಸಂಪರ್ಕವೇ ಹೊಟ್ಟೆ ಪಾಡಾದ ವೇಶ್ಯೆಯರೂ, ಸುರಕ್ಷಣಾ ವಿಧಾನಗಳಿಗೆ ಬಲವಂತಿಸಿದರೆ ತಮ್ಮ ಗಿರಾಕಿಗಳನ್ನು ಕಳೆದುಕೊಳ್ಳುವ ಭಯವಿದ್ದೇ ಇರುತ್ತದೆ. ಹೀಗಾಗಿ ಮಹಿಳೆ ವಿವಾಹದ ಒಳಗೆ–ಹೊರಗೆ ಎರಡೂ

ಕಡೆಯಲ್ಲೂ 'ಏಡ್ಸ್' ತಡೆಗಟ್ಟುವಲ್ಲಿ ಬಹಳಷ್ಟು ಅಸಮರ್ಥಳಿದ್ದಾಳೆ. ಇದಕ್ಕೆ ಮಹಿಳೆಯರೇ ವಹಿಸ ಬಹುದಾದ ಎಚ್ಚರಿಕೆಗಳತ್ತ ಹೆಚ್ಚು ಪ್ರಚಾರ ಆಗದಿರು ವುದೂ ಮುಖ್ಯ ಕಾರಣ.

'ಬಹಳಷ್ಟು 'ಏಡ್ಸ್' ಜಾಹಿರಾತುಗಳು ಪುರುಷ ಕೇಂದ್ರಿಕೃತವಾಗಿವೆ. 'ಕಾಂಡೋಮ್ ಧರಿಸಿ, ಏಡ್ಸ್ ನಿಂದ ಸುಖ ಪಡೆಯಿರಿ' ಎಂಬುದು ಕೇವಲ ಪುರುಷರ ಸಂರಕ್ಷಣೆಯನ್ನು ಹೇಳುತ್ತದೆಯೇ ಹೊರತು ಮಹಿಳೆ ಕೈಗೊಳ್ಳಬೇಕಾದ ಕ್ರಮಗಳನ್ನು ತಿಳಿಸುವುದಿಲ್ಲ' ಎಂದು ಲೇಖಕಿಯರು ಅನೇಕ ಪತ್ರಿಕೆಗಳಲ್ಲಿ, ಜಾಹಿರಾತುಗಳ ಈ ಮಿತಿಯ ಬಗ್ಗೆ ಗಮನ ಸೆಳೆದಿದ್ದಾರೆ. ಪುರುಷ ಧರಿಸಲಿಚ್ಛಿಸದಿದ್ದರೆ ಮಹಿಳೆಗೆ ಏನು ಮಾಡಬೇಕೆಂಬುದರ ಅರಿವಿಲ್ಲ. ಆಕೆ ತನ್ನ ಸುರಕ್ಷಣೆಯ ಭಾರವಷ್ಟನ್ನೂ ಪುರುಷನ ಮೇಲೆ ಹೇರಿ ಕಾಯಬೇಕು. ಬಹುಷಃ 'ಡೈಯಾಫ್ರಮ್'ನಂಥವು ಮಹಿಳೆಗೆ ಸುರಕ್ಷಣೆ ನೀಡ ಬಲ್ಲದೇ ಎಂದು ವೈದ್ಯರು ಪರಿಶೀಲಿಸಬೇಕಿದೆ. ಮಹಿಳೆಯ ರಕ್ಷಣೆಗೆ ಹೊಸ ವಿಧಾನಗಳನ್ನು ಕಂಡು ಹಿಡಿಯಬೇಕಿದೆ.

'ಏಡ್ಸ್'ನ ಲಕ್ಷಣಗಳ ಪ್ರಸಾರ ಕೂಡಾ, ಗಂಡಸರ ದೇಹದ ಮೇಲಿನ ಪರಿಣಾಮಗಳನ್ನೇ ಹೆಚ್ಚು ಪ್ರಚುರ ಪಡಿಸಿದೆ. 'ಏಡ್ಸ್' ರಕ್ತ, ವೀರ್ಯಗಳಿಂದ ಹರಡು ವಂತೆಯೇ, ಯೋನಿಸ್ರಾವ. ಮುಟ್ಟಿನ ರಕ್ತ, ಎದೆ ಹಾಲಿ ನಿಂದಲೂ ಹರಡುವ ಬಗ್ಗೆ ಹೆಚ್ಚು ಗಮನ ಹರಿದಿಲ್ಲ.

ನಮ್ಮ ಸಮಾಜದಲ್ಲಿ ಮಹಿಳೆಗೆ ಲೈಂಗಿಕತೆಯ ಬಗ್ಗೆ ಮಾತನಾಡುವುದು, ಪತಿಯೊಡನೆ ಕೂಡಾ ಚರ್ಚಿಸು ವುದು, ಇನ್ನೂ ವಿದ್ಯಾವಂತ ಮಹಿಳೆಯರಿಗೂ ಸಂಪೂರ್ಣ ಸಾಧ್ಯವಾಗಿಲ್ಲ. 'ಒಳ್ಳೆ ಹೆಣ್ಣು ಮಕ್ಕಳು ಲೈಂಗಿಕತೆ ಯನ್ನು ಕುರಿತು ಮಾತನಾಡಬಾರದು' ಎಂದೇ ತಲೆ ತೊಳೆದು ಬೆಳಸಿರುವಾಗ, ಸಹಜವಾಗಿಯೇ ಈ ವಿಷಯ ಗಳನ್ನು ಕುರಿತು ಹೇಗಸರಲ್ಲಿ ವಿಪರೀತದ ಹಿಂಜರಿಕೆ, ಮುಜುಗರ ಇದೆ. ನಮ್ಮ ಸಮಾಜದ ಒಟ್ಟು ಮನೋ ಭಾವವನ್ನು ಇಂದಿನ 'ಏಡ್ಸ್' ಯುಗದಲ್ಲಿ ದಿಢೀರನೆ ಬದಲಿಸಬೇಕಾದ ಅಗತ್ಯವಿದೆ. ಹಾಗೆಂದೇ ಪ್ರಸಾರ ಮಾಧ್ಯಮದಲ್ಲಿ ಹೆಣ್ಣಿನತ್ತ, ಸಾಮಾನ್ಯ ಗೃಹಿಣಿಯತ್ತ ತಮ್ಮ ಗಮನ ಹರಿಸಬೇಕಿದೆ. ಕಾರಣ ಮಹಿಳೆಗೆ ತಗುಲುವ ಕಾಯಿಲೆ ನಮ್ಮ ಮುಂದಿನ ಜನಾಂಗವನ್ನೇ ಮುಳುಗಿಸಬಲ್ಲದು. ಇಂದು 'HIV ಪಾಸಿಟಿವ್ ಹುಡುಗನಿಗೆ ವಧು ಬೇಕು' ಎಂಬ ಜಾಹಿರಾತಿಗೂ ಹೆಣ್ಣು ಕೊಡಲು ಧಾವಿಸಿದ ಅನೇಕ ಪ್ರಕರಣಗಳನ್ನು ಕೇಳಿದ್ದೇವೆ. ಅಜ್ಞಾನದಿಂದಲೋ, ಹೇಗಾದರೂ ಮಗಳಿಗೆ ಮದುವೆ ಯಾದರೆ ಸಾಕೆಂಬ ಅಸಡ್ಡೆಯಿಂದಲೋ ಇಂಥಾ ಆತಂಕದ ಪರಿಸರ ರೂಪುಗೊಂಡಿದೆ. ಇಂದು ವಿವಾಹದಲ್ಲಿ ಜಾತಕ ಕೂಡಿಸುವ ಬದಲು, ರಕ್ತ ಪರೀಕ್ಷೆ ಮಾಡಿಸುವ ಅಗತ್ಯ ಎಂದಿಗಿಂತಲೂ ಹೆಚ್ಚಿದೆ.

ಕ್ಯಾತೆ ಕೋಲ್ ವಿಜ್ :
ದುರಂತದ ಮುಖಗಳು.

ರವಿಕುಮಾರ, ಕಾಶಿ



ತಂತೆ, ತಾಯಿ ವುಡ್ ಕಟ್ ಮಾಧ್ಯಮ

ಬಲು ಗಂಭೀರವಾಗಿ ಕೂತ ವ್ಯಕ್ತಿಯ ಮೋರೆಯ ಮೇಲೆ ನೋವಿನ ಛಾಯೆ ; ಹಿಂದಿನಿಂದ ಬಂದ ಕರಾಳ ಕೈ ; ಅನಾಮತ್ತಾಗಿ ವ್ಯಕ್ತಿಯನ್ನು ಇಲ್ಲಿಂದ ಮುಕ್ತ ಮಾಡಿಬಿಡುವ ಸ್ಪರ್ಶ. ಕೃತಿಯ ಹೆಸರು 'ಸಾವಿನ ಕರೆ' ನೋಡು ನೋಡುತ್ತಲೆ ಯಾವುದೇ ಕ್ಷಣದಲ್ಲೂ ಅಚಾನಕ್ಕಾಗಿ ತಟ್ಟಿ, ಎಬ್ಬಿಸಿ ಕರೆದೊಯ್ದುಬಿಡುವ ಸಾವಿನ ಬಗ್ಗೆ ಗುಂಯ್ಯನೆ ವಿಚಾರಗಳು ತಲೆಯನ್ನು ತುಂಬಿಬಿಡುತ್ತವೆ, ಕಾಣದ, ಆದರೆ ಕರಾರುವಕ್ಕಾದ ಕಪ್ಪು ಕೈಗಳ ಅಧಿಕಾರ– ಎಷ್ಟು ಪ್ರಭಾವಿ. ನಿಜ, ಇದು ಕ್ಯಾತೆಯ ಕೃತಿ. ಅವರ ಶಕ್ತಿಯೇ ಅಂಥಾದ್ದು. ಅವುಗಳಲ್ಲಿ ಹುದುಗಿರುವ ಮಾನವೀಯ ಪ್ರೇಮ, ಅನುಕಂಪ, ದುರಂತಗಳನ್ನು ಅನುಭವಿಸದೆ ಯಾರೂ ಸಹ ಇವುಗಳತ್ತ ಹೆಚ್ಚು ಹೊತ್ತು ನೋಡುವುದು ಸಾಧ್ಯವೇ ಇಲ್ಲ.

ಜರ್ಮನ್ ಕಲಾವಿದರಲ್ಲೇ ತನ್ನ ವಿಶಿಷ್ಟ ವೈಯಕ್ತಿಕ ಶೈಲಿಯನ್ನು ಛಾಪಿಸಿದ ಕಲಾವಿದೆ ಕ್ಯಾತೆ ಕೋಲ್‌ವಿಜ್ ಜನನ 1867ರಲ್ಲಿ. 1880 ರಲ್ಲಿ ಆರಂಭವಾದ ಈಕೆಯ ಕಲಾ ಸೃಷ್ಟಿ 1945ರಲ್ಲಿ ಸಾವಿನ ತನಕವೂ ಹರಿಯಿತು. ಪ್ಯಾರಿಸ್‌ನ ಅಕಾಡೆಮಿ ಜ್ಯೂಲಿಯನ್‌ನಲ್ಲಿ ಶಿಲ್ಪಶಾಸ್ತ್ರದ ಪ್ರಥಮ ತರಬೇತಿ. ಆದರೂ ಪೆಚ್ಚಿನ ಕೃತಿಗಳ ಮಾಧ್ಯಮವಾಗಿ ಆಯ್ದುಕೊಂಡದ್ದು ಗ್ರಾಫಿಕ್. ಜರ್ಮನಿಯ ಜೋಪಡಿ ಪಟ್ಟಿಗಳಲ್ಲಿ ಸೇವೆ ನಡೆಸುತ್ತಿದ್ದ ಓರ್ವ ವೈದ್ಯ ಈಕೆಯ ಪತಿ. ಸ್ಪೇನಿನ ಕಲಾವಿದನಾದ ಗೋಯೋ ಮನುಷ್ಯನಾಗಿ ಕಲಾವಿದನಾಗಿ ಕ್ಯಾತೆಯ ಮೇಲೆ ಪ್ರಭಾವ ಬೀರಿದ.

ಎರಡನೆಯ ಮಹಾಯುದ್ಧಗಳಿಗೆ ಸಾಕ್ಷಿಯಾಗಿ, ಪಾತ್ರಧಾರಿಗಳಾಗಿ ಬದುಕಿದ ಕ್ಯಾತೆಯ ಜನಾಂಗದವರಿಗೆ ಬರೀ ಯುದ್ಧಗಳಷ್ಟೇ ಅವರ ಆದರ್ಶಗಳನ್ನು ಛಿದ್ರವಾಗಿಸಿತ್ತು ಎಂದಲ್ಲ, ಸಾಮಾಜಿಕ, ಘರ್ಷಣೆ ಇದ್ದೇ ಇತ್ತು. ಈ ಸಾಮಾಜಿಕ ವ್ರಣಗಳನ್ನು ನಿರ್ಲಕ್ಷಿಸ ಬಯಸುವವರಿಗೆ ಆಕೆಯ ಕೃತಿಗಳು ಆಘಾತವಾಗಿದ್ದವು. ಮಡಿಲಲ್ಲಿ ಮಗುವನ್ನು ಕೂಡಿಸಿಕೊಂಡ ಸಾವು ಅಥವಾ ರಸ್ತೆಯ ಮಧ್ಯದಲ್ಲಿ ಮುಖವನ್ನು ಎಡಗೈನಿಂದ ಅರೆ ಮುಚ್ಚಿಕೊಂಡು ಕುಳಿತ ಸ್ತ್ರೀ ಅಥವಾ ಹಸಿವಿನಿಂದ ಕಂಗಾಲಾದ ರೈತರ ಚಿತ್ರಣ, ಅವರ ದಂಗೆ ಇಂಥ ಪ್ರತಿಮೆಗಳ ಅಗದಿ ಸರಳತೆ ಮತ್ತು ಅದರಿಂದುಂಟಾಗುವ ಅಗಾಧ ಪರಿಣಾಮ ಇವು ಕ್ಯಾತೆಗೆ ಬಡವರ, ಕಂಗಾಲಾದವರ ಬಗೆಗಿದ್ದ ಅಪಾರ ಸಹಾನುಭೂತಿ ಮತ್ತು ಕಷ್ಟದಲ್ಲಿ ಅವರೊಂದಿಗೆ ನಿಲ್ಲುವ ಧೃಡತೆ ಇವುಗಳಿಂದ ಜನಿಸಿದ್ದು ದುರಂತವಿದ್ದೂ ಈ ಎಲ್ಲ ಕೃತಿಗಳಲ್ಲಿ ಕಷ್ಟದ ಎದುರಾಗಿ ನಿಲ್ಲುವ ಮಾನವೀಯ ಘನತೆಗೆ ಸ್ಥಾನವಿದೆ, ಹೋರಾಟಕ್ಕೆ ಆಸ್ಪದವಿದೆ.

ಈ ಚಿತ್ರಗಳ ನಿರ್ದಯವಾದ ಸಾಮಾಜಿಕ ವಾಸ್ತವತೆ, ಕಹಿಯಾದ ಹಾಗೂ ಕಠೋರವಾದ ಜೀವನ ಸತ್ಯ ಇವು ಸಮಾಜದ ಅಂತರ್ಯವನ್ನು ಕುಲುಕುವುದ ಕ್ಕಾಗಿ ರಚಿಸಿದ್ದಾಗಿದೆ. ಇವು ಅಂದ ಚಂದದ ಚಿತ್ರಗಳಲ್ಲ, ಇಲ್ಲಿನ ದುರಂತದ ಮುಖಗಳು ಪ್ರೇಕ್ಷಕರ ಮನವನ್ನು ತಟ್ಟುವುದಕ್ಕೆಂದೇ ರಚಿತವಾಗಿದೆ.

ತನ್ನ ಕಳಕಳಿಗಳನ್ನು ಅಭಿವ್ಯಕ್ತಿಸಲಿಕ್ಕೆ 1919 ರಿಂದ ಕ್ಯಾತೆ ಗ್ರಾಫಿಕ್ ಮಾಧ್ಯಮವನ್ನು ಆಯ್ದು ಕೊಂಡಳು. ಅವಳ ಗ್ರಾಫಿಕ್ ಕೃತಿಗಳು ಆ ಕಾಲಕ್ಕೇ ಜರ್ಮನಿಯಲ್ಲಿ ಬಹಳ ಪ್ರಸಿದ್ಧವಾಗಿತ್ತು, ಕ್ಯಾತೆ ಗ್ರಾಫಿಕ್ ಮಾಧ್ಯಮದ ತಂತ್ರಗಳಾದ ಎಚ್ಚಿಂಗ್, ಆಕ್ವಾ ಟಿಂಟ್, ಸಾಫ್ಟ್ ಗ್ರೌಂಡ್, ಲಿಥೋಗ್ರಫಿ, ವುಡ್‌ಕಟ್ ಗಳನ್ನು ಕರಗತ ಮಾಡಿಕೊಂಡದಷ್ಟೇ ಅಲ್ಲ, ತನ್ನದೇ ಆದ ನಿಜಕ್ಕೂ ವಿಶಿಷ್ಟವಾದ ಸಂಯೋಜನಾ ಪರಿಕರ ಗಳನ್ನು ಬೆಳೆಯಿಸಿಕೊಂಡಿದ್ದಳು. ಇದರೊಂದಿಗೆ ತನ್ನ ನೂರಾರು ಅಂಕನೆಗಳಲ್ಲಿ, ರೇಖಣೆಗಳಲ್ಲಿ ನಮ್ಮ ಕಾಲದ ಅತ್ಯಾಚಾರಗಳ ವಿರುದ್ಧ ಗಮನ ಸೆಳೆದಳು.

ಗ್ರಾಫಿಕ್‌ನ ಒಂದು ತಂತ್ರವಾದ ವುಡ್‌ಕಟ್ ಪದ್ಧತಿ ಯನ್ನು ಕ್ಯಾತೆ ವಿಶಿಷ್ಟವಾಗಿ ಬಳಸಿದ್ದಾಳೆ. 'ನೈಲೇಸಿ ಯಾದ ಕೈಮುಗ್ಗದವರು' ಅನ್ಯಾಯದ ವಿರುದ್ಧ ರೈತರ ದಂಗೆ, ಮುಗ್ಧರ ಸಾವು ಇಂಥ ಚಿತ್ರಗಳಲ್ಲಿ ಹಿಟ್ಲರನ ಪಾಶವಿ ಆಡಳಿತಕ್ಕೆ ತುತ್ತಾದವರ ಕುರಿತು ಕಾಳಜಿಯಿದೆ, ಈಕೆಯ ಎಚ್ಚಿಂಗ್‌ಗಳು ಸರಳ; ಮನಕಲಕುವ ಚಿತ್ರಣ; ಧೃಡವಾದ ಸತುವಿನಲ್ಲಿ ಆಳವಾಗಿ ಕೊರೆದ ರೇಖೆಗಳು, ಆಕ್ವಾಂಟಿಟ್‌ನ ಬಳಕೆಯಿಂದ ಉಂಟಾದ ನಾಟಕೀಯ ಪರಿಣಾಮಗಳು ಬಹು ಶಕ್ತವಾದವು.

ಗ್ರಾಫಿಕ್ ತಂತ್ರವು ಅಗ್ಗವಾದ ಮತ್ತು ಸುಲಭ ವಾಗಿ ಪ್ರತಿ ಮಾಡಬಹುದಾದ ತಂತ್ರವಾಗಿದ್ದು, ಭೂಗತ ರಾಜಕೀಯ ಚಟುವಟಿಕೆಗಳಲ್ಲಿ ಮುಖ್ಯಪಾತ್ರ ವಹಿಸಿತು. ಅಂತಲೇ ರಾಜಕೀಯವಾಗಿ ಪ್ರೇರಣೆಗೊಂಡ ಎಲ್ಲ ಕಲಾ ಚಳವಳಿಗಳ ಕಾಲದಲ್ಲೂ ನಾವು ಲಿಥೋ ಗ್ರಾಫಿಯ ಪುನರುಜ್ಜೀವಿತಗೊಂಡಿದ್ದನ್ನು ಕಾಣುತ್ತೇವೆ, ಬಹು ಕಮ್ಮಿ ಸೌಲಭ್ಯಗಳಿರುವ ಕಾರ್ಯಾಗಾರಗಳೂ ಸಹ ಈ ಸಮಯದಲ್ಲಿ ಬಳಸಲ್ಪಟ್ಟವು. ಕ್ಯಾತೆಯ ಕೃತಿಗಳು ಬೆಳಕು ಕಾಣುವುದನ್ನು 1933ರಲ್ಲಿ ನಿಷೇಧಿಸಲಾಗಿತ್ತು. ಹಿಟ್ಲರನು ಅಸ್ಪೃಶ್ಯರೆಂದು ಘೋಷಿಸಿದ ಕಲಾವಿದರ ಕಪ್ಪು ಪಟ್ಟಿಯ ಯಾದಿಯಲ್ಲಿ ಈಕೆಯ ಹೆಸರಿತ್ತು. ಆದರೆ ಇಲ್ಲಿ ಕುಹಕದೆಂದರೆ–ಇದೇ ಕಲಾವಿದೆಯ ಕೃತಿ ಗಳನ್ನು ೭೦ರ ದಶಕಗಳಲ್ಲಿ ತನ್ನ ತುತ್ತೂರಿ ಸಾರುವ ಜಾಹಿರಾತು ಪ್ರಕಟಣೆಗಳಲ್ಲಿ ತಿರುಚಿ, ವಿಕೃತಗೊಳಿಸಿ ಸರ್ಕಾರ ಬಳಸಿಕೊಂಡಿತ್ತೆಂಬುದು.

ಕ್ಯಾತೆಯ ಲಿಥೋಗ್ರಾಫಿಗಳು – ಕಪ್ಪು ವರ್ಣ ದಲ್ಲಿ ಮುದ್ರಣಗೊಂಡಿದ್ದು ಆಕೆಯ ಕಾಳಜಿಗಳನ್ನು ಮತ್ತು ಬದುಕಿನ ಕರಾಳ ಭಾಗಗಳನ್ನು ಮುಖಕ್ಕೆ ರಾಚು ವಷ್ಟು ನೇರವಾಗಿ ಎತ್ತಿ ಹಿಡಿಯುತ್ತವೆ. ಕತ್ತಲ ಕೋಣೆ, ಮಧ್ಯದಲ್ಲಿರುವ ಟೇಬಲ್ಲಿನ ಸುತ್ತ ಕುಳಿತ ವ್ಯಕ್ತಿಗಳು. ಟೇಬಲ್ಲಿನ ಹಾಗೂ ವ್ಯಕ್ತಿಗಳ ಮುಖದ ಮೇಲೆ ಅಸ್ಪಷ್ಟ ವಾಗಿ ಅಲ್ಲಲ್ಲಿ ಚೆಲ್ಲಾಡಿರುವ ಕಂದೀಲು ಬೆಳಕು. ಗಾಳಿ ಯಲ್ಲಿ ಶಂಕೆ, ಆತಂಕ, ಪಿತೂರಿಯ ವಾಸನೆ, ಇದು ರೈತರ ದಂಗೆ ಸಂದರ್ಭದ ಕಾರ್ಯಕರ್ತರ ಭೂಗತ ಸಭೆಯ ಚಿತ್ರಣ. ರೈತರ ದಂಗೆಯನ್ನು ಬಣ್ಣಿಸುವ ಆಕೆಯ ಹಲವು ಕೃತಿಗಳಲ್ಲಿ ಹತಾಶೆ ಹಾಗೂ ಒಟ್ಟೊಟ್ಟಿಗೆ ನಾಟಕೀಯ ಚಲನಶೀಲತೆಯನ್ನು ಕಾಣುತ್ತೇವೆ ಜನನದ ವೇಳೆಯಲ್ಲಿ ನೋವುಣ್ಣುತ್ತಿರುವ ತಾಯಿ ಮತ್ತು ಸಾವಿನ ಪ್ರತಿಮೆಯಲ್ಲಿರುವ ನೋವಿನ ಅನುಭವ, ಅದರ ಅಭಿವ್ಯಕ್ತಿ ಕ್ಯಾತೆಗೆ ಮಾತ್ರ ಸಾಧ್ಯವಾದದ್ದು. ಮತ್ತು ಕ್ಯಾತೆಯ ಸ್ವಂತ ಭಾವಚಿತ್ರಗಳು : ಆಕೆಯ ವ್ಯಕ್ತಿತ್ವದ ಶೀಲದ ಬೆಳವಣಿಗೆಯ ಅನೇಕ ಘಟ್ಟಗಳನ್ನು ದಾಖಲಿಸಿ ದರೆ ಬಾಳ ಸಂಜೆಯಲ್ಲಿ ಬಿಡಿಸಿದ ಸ್ವಂತ ಭಾವಚಿತ್ರಗಳು ಪಕ್ವತೆಯನ್ನೂ ಆಕೆಯ ಜೀವ ತಳೆದ ಗಾಂಭೀರ್ಯವನ್ನೂ ಸೂಸುತ್ತವೆ.

ಸಾಮಾನ್ಯವಾಗಿ ಕ್ಯಾತೆಯನ್ನು ಎಕ್ಸ್‌ಪ್ರೆಷನಿಸ್ಟ್ ಪಂಥದವರೊಂದಿಗೆ ಸೇರಿಸುವ ಪರಿಪಾಠವಿದ್ದರೂ, ಆಕೆಯ ಸಂಯೋಜನೆಯ ರೀತಿ, ರೇಖೆಗಳು, ಕೃತಿಗಳ ಅಭಿವ್ಯಕ್ತ ಭಾವ, ವಸ್ತು ಎಂದೂ ಸಹ ಒಂದು ಗುಂಪಿಗೆ ಸೇರಿದ್ದಾಗಿರದೆ ವೈಶಿಷ್ಟ್ಯ ಪೂರ್ಣ ವೈಯಕ್ತಿಕ ಥಳುಕುಗಳನ್ನು ಉಳಿಸಿಕೊಂಡಿತು, ೨೦ ನೇ ಶತಮಾನದ ಮೊದಲ ದಶಕಗಳಲ್ಲಿ ಕಲೆಯಲ್ಲಾದ ಮಹತ್ತರ ಬದಲಾವಣೆಗಳೂ ಆಕೆಯನ್ನು ಸಂಪೂರ್ಣ ಬದಲಿಸಲಿಲ್ಲವಾಗಿ ಆಕೆಯ ಕೃತಿಗಳು ಎಲ್ಲರಿಗಿಂತ ಭಿನ್ನವಾಗಿಯೇ ಉಳಿದುವು.

ಇಂದಿನ ನಮ್ಮ ಸಮಕಾಲಿನ ಕೃತಿಗಳು – ಹೆಚ್ಚು ಭಿನ್ನ ಮಾರ್ಗಗಳಾಗಿ, ಆದರ ಅನುಭವ ಮೇಲು ಮೇಲಿನ ತಿಳಿಯಂತೆ, ರಚನಾ ತಂತ್ರ ಹೆಚ್ಚು ಸಂಕೀರ್ಣ ಕ್ಲಿಷ್ಟ ಎನ್ನಿಸಿದರೂ ಅವುಗಳ ಆಳದಲ್ಲಿ ಸಮಾಜದ, ದೈನಂದಿನ ಜೀವನದ ಕುರಿತು ಆಳವಾದ ಕಳಿಕಳಿಯಿದ್ದು, ಈ ಕಾಳಜಿಯ ಹಿಂದೆ ಕ್ಯಾತೆ ಕೋಲ್‌ವಿಜ್ ರಂತಹ ಕಲಾವಿದೆಯ ಪ್ರೇರಣೆಯಿದೆ, ನಿಷ್ಠೆಯಿದೆ.

ಋಣ : (1) *Print Making History & Process by DONALD SAFF*

(2) *Lithography by Richard Vicary.*

ಗ್ರಾಫಿಕ್ ಮಾಧ್ಯಮದ ಬಗ್ಗೆ

ಗ್ರಾಫಿಕ್ ಎಂಬ ಪದಕ್ಕೆ ಹಲವಾರು ಅರ್ಥಗಳಿವೆ. GRAPHY ಎಂಬ ಪದ ಪ್ರತಿ ಮಾಡುವುದನ್ನು ಸೂಚಿಸಿ, ಅದರ ಹಿಂದೆ ಬರುವ LITHO (ಕಲ್ಲು) GRAPHY ; SERI (ರೇಷ್ಮೆ) GRAPHY ; PHOTO (ಬೆಳಕು) GRAPHY ಈ ಪದಗಳು ಪ್ರತಿ ಮಾಡುವ ತಂತ್ರದ ಬಗ್ಗೆ ತಿಳಿಸುತ್ತವೆ, ಗ್ರಾಫಿಕ್‌ನ್ನು ಒಂದು ಮಾಧ್ಯಮ ಎಂದಾಗ–ಕಲಾವಿದನೇ ಸ್ವತಃ ಅಚ್ಚನ್ನು ತಯಾರಿಸುವುದು, ಹಲವಾರು ಕರಡು ಪ್ರತಿಗಳನ್ನು ತೆಗೆಯುತ್ತಾ ಅಚ್ಚನ್ನು ತಿದ್ದುತ್ತಾ ಹೋಗುವುದು ಹಾಗೂ ಅಂತರರಾಷ್ಟ್ರೀಯ ನಿಯಮದಂತೆ ಕೆಲವೇ ಪ್ರತಿಗಳನ್ನು ತೆಗೆದು ಅಚ್ಚನ್ನು ನಾಶಪಡಿಸುವುದು. ಇವೇ ಮೊದಲಾದ ಏಕ ವ್ಯಕ್ತಿಯ ದುಡಿಮೆಯಿಂದ ಗ್ರಾಫಿಕ್ ಮುದ್ರಣಗಳು ವ್ಯಾಪಾರಿ ವೃತ್ತಿ ಮುದ್ರಣದಿಂದ ಬೇರೆಯಾಗಿ ನಿಲ್ಲುತ್ತದೆ.

ಗ್ರಾಫಿಕ್ ಮಾಧ್ಯಮದಲ್ಲಿ ಬಳಸುವ ಪರಿಕರಗಳು, ತಂತ್ರ, ಇವುಗಳ ಆಧಾರದಿಂದ ಇವನ್ನು ನಾಲ್ಕು ವಿಭಾಗಗಳಾಗಿ – ವುಡ್‌ಕಟ್, ಎಚ್ಚಿಂಗ್, ಲಿಥೋಗ್ರಫಿ ಹಾಗೂ ಸ್ಕ್ರೀನ್ ಪ್ರಿಂಟಿಂಗ್‌ಗಳೆಂದು ವಿಂಗಡಿಸಲಾಗುತ್ತದೆ.

– ಪುಸ್ತಕ ವಿಮರ್ಶೆ –

ಆಶೋತ್ತರಗಳ ಪ್ರತಿನಿಧಿ

ಚರಿತ್ರೆಯಲ್ಲಿ ನಡೆದು ಹೋಗಿರುವ ಘಟನೆಗಳನ್ನು ಇಲ್ಲವಾಗಿಸುವ ಪ್ರವೃತ್ತಿ ಈಚಿನ ದಿನಗಳಲ್ಲಿ ಹಿಂಸೆ, ಅನಾಚಾರ, ಇತ್ಯಾದಿ ರೀತಿಗಳಲ್ಲಿ ಪ್ರಕಟವಾಗುತ್ತಾ ಬಂದಿದೆ. ನಮ್ಮ ರಾಷ್ಟ್ರದ ನಾಲ್ಕು ಸಾವಿರ ವರ್ಷಗಳ ಇತಿಹಾಸದಲ್ಲಿ ಶೂದ್ರ ಮತ್ತು ಅಸ್ಪ್ರಶ್ಯರೆಂದು ಹೇಳಲಾದ ಅಗಾಧ ಜನಸ್ತೋಮಕ್ಕೆ ನಾವು ಬಗೆದಿರುವ ಅವಮಾನ ಯಾರನ್ನಾದರೂ ಸಿಟ್ಟಿಗೇಳಿಸಬಹುದು. ಆ ಜನ ತಮ್ಮ ನಾಲ್ಕು ಸಹಸ್ರ ವರ್ಷಗಳ ಅವಮಾನಕ್ಕೆ ಪ್ರತೀಕಾರ ತೆಗೆದುಕೊಳ್ಳಲು ತೀರ್ಮಾನಿಸಿದರೆ ಈ ರಾಷ್ಟ್ರದ ಅಲ್ಪ ಸಂಖ್ಯಾತರಾದ ಇತರ ಜಾತಿಗಳವರು ಕಂಗಾಲಾಗಿ ನಡುಗ ಬೇಕು. ಅವರು ಪ್ರತೀಕಾರದ ಚಿಹ್ನೆಯಾಗಿ ಪ್ರಸಿದ್ಧ ವಾದ ಒಂದೆರಡು ಪ್ರಾಚೀನ ಮಠಗಳನ್ನು ಮತ್ತು ಅವುಗಳ ಪೀಠಾಧಿಪತಿಗಳನ್ನು ಉರುಳಿಸಬಹುದೇನೋ !

ಮಹಾಯಾತ್ರೆ

ಜಯಪ್ರಕಾಶ ಮಾವಿನಕುಳಿ

ಸ್ಫಟಿಕ ಪ್ರಕಾಶನ, ಗುರುನಿಕೇತನ

ಕೋಡಂಗಲ್ಲು, ಮೂಡುಬಿದಿರೆ–೫೭೪ ೧೯೭

ಆದರೆ ಅವರು ಹಾಗೆ ಮಾಡುವುದಕ್ಕಿಂತಲೂ ಇಡೀ ಸಮಾಜದ ಐಕ್ಯತೆಯ ಬುನಾದಿಯ ಮೇಲೆ ಸಂವಿಧಾನಾತ್ಮಕವಾಗಿ ಭವಿಷ್ಯದ ಸಮಾನತೆಯ ಸಮಾಜ ಕಟ್ಟಲು ಶ್ರಮಿಸುವುದು ಹೆಚ್ಚು ಯೋಗ್ಯವೆಂದು ಬಗೆದಂತೆ ತೋರುತ್ತದೆ. "ರಾಷ್ಟ್ರೀಯ ಅಪಮಾನ" ದ ಕುರುಹೆಂದು ಒಂದು ಪುರಾತನ ಮಸೀದಿಯನ್ನು ಧ್ವಂಸ ಮಾಡುವುದಕ್ಕಿಂತಲೂ ಸುಸಂಸ್ಕೃತವಾದ ಮಾರ್ಗ ಇದು. ಏಕೆಂದರೆ, ಮಂದಿರದ ರಾಜಕೀಯದ ಪ್ರಾಬಲ್ಯದಿಂದಾಗಿ ಸಂಸ್ಕೃತಿಯ ಪ್ರಾಥಮಿಕ ಲಕ್ಷಣವಾದ ಮಾನವೀಯತೆ ಮಸೀದಿಯ ಪಾಳಿನ ಕೆಳಗೆ ಹೂತುಹೋಯಿತು. ಹಿಂದುತ್ವದ ಹೆಸರಿನಲ್ಲಿ ಸಾವಿರಾರು ಜನರ ಕೊಲೆಯಾಗುವುದು ಆ ಧರ್ಮದ ನಿಟ್ಟಿನಲ್ಲಿ ಸಹ ಅಧರ್ಮವೆದು ಪರಿಗಣನೆಗೆ ಬರುತ್ತದೆ. ಇದಕ್ಕೆಲ್ಲಾ ಹಿನ್ನೆಲೆಯಾಗಿರುವುದು ಒಂದು ಜನಾಂಗದವರ ದ್ವೇಷವೇ ವಿನಾ ಯಾವುದೋ ಪುರುಷೋತ್ತಮನಲ್ಲಿನ ಭಕ್ತಿ–ಆದರಗಳಲ್ಲ.

ಇಂತಹ ಜನಾಂಗ ದ್ವೇಷವಿಲ್ಲದಿದ್ದರೂ ಸಮಾಜದಲ್ಲಿ ಆಂತರಿಕವಾದ ಹಿಂಸೆ, ಅನಾದರ, ಏರುಪೇರು, ಶ್ರೇಷ್ಠ–ಕನಿಷ್ಠ ಎಂಬ ದುರ್ಭಾವನೆ, ಇತ್ಯಾದಿ ಇರಲು ಸಾಧ್ಯ. ವಸ್ತು ಸ್ಥಿತಿಯ ಸಮರ್ಥನೆ ನೀಡದಿದ್ದಾಗಲೂ ಕೆಲವು ನಂಬಿಕೆ, ಶ್ರದ್ಧೆಗಳು ಹುಟ್ಟಿಕೊಳ್ಳುವುದು ಈ ಏರುಪೇರುಗಳನ್ನು ದೃಢೀಕರಿಸಿಕೊಳ್ಳುವುದಕೋಸ್ಕರ. ಅಂದರೆ ಮೂಢನಂಬಿಕೆ ಮತ್ತು ಅದನ್ನಾಧರಿಸಿದ ಸಂಸ್ಥೆಗಳು ಪ್ರತಿಷ್ಠಿತ ವ್ಯಕ್ತಿ ಮತ್ತು ಶಕ್ತಿಗಳಿಗೆ ಒಂದು ಆಯುಧ. ಅದು ಆಯುಧವಾಗಿರುವುದರೊಟ್ಟಿಗೆ ವೈಯಕ್ತಿಕ ಸಾಂತ್ವನ ದೊರಕಿಸಿಕೊಡುವ ಕ್ರಿಯೆಯಲ್ಲೂ ತೊಡಗಿರಬಹುದು, ಇಲ್ಲವೇ ತೊಡಗಲು ಸಾಧ್ಯ, ಆದರೆ ಅದಷ್ಟೇ ಅದರ ಉದ್ದೇಶವಲ್ಲ.

ಮಠಗಳಂತಹ ಸಂಸ್ಥೆಗಳು ಹಾಗೆ ಕೆಟ್ಟಹಾದಿ ಹಿಡಿಯಬಾರದು, ಎಂಬ ಒಂದು ಮಾತು ಹೇಳಿ ಸಾಂಸ್ಥಿಕ ಮಠ ಸಂಸ್ಕೃತಿಗೆ ಮತ್ತು ಪ್ರಕ್ರಿಯೆಗೆ ಅಂಟುವ ಕಳಂಕವನ್ನು ತೊಡೆದುಹಾಕುವಂತಿಲ್ಲ. ಏಕೆಂದರೆ, ಈ ಕಳಂಕ ಹಲವು ರೀತಿಗಳಲ್ಲಿ ಚರಿತ್ರೆಯುದ್ದಕ್ಕೂ ಅವಕ್ಕೆ ಅಂಟಿಕೊಂಡು ಬಂದಿರುವ ಸಾಂಕ್ರಾಮಿಕ ರೋಗ. ಮಠಗಳ ಮಹಿಮೆಯು ಹಿಂದೆ ಎಲ್ಲೋ ಈ ಕಳಂಕ ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಹುದುಗಿರುತ್ತದೆ, ಮಠಗಳು ಅಸ್ತಿತ್ವಕ್ಕೆ ಬರುವುದೇ ಜೀವನದ ಕೆಲವು ಪ್ರಕರಣಗಳನ್ನು ನಿಷೇಧಿಸುವುದರಿಂದ ಮತ್ತು ಅವಕ್ಕೆ ಕುಠಾರ ಪ್ರಾಯವಾಗಿ, ಪ್ರಸ್ತುತ ನಾಟಕ"ಮಹಾಯಾತ್ರೆ"ಯ ಮೊದಲ ದೃಶ್ಯದಲ್ಲೇ ಶ್ರೀ ಜಯಪ್ರಕಾಶ್ ಮಾವಿನಕುಳಿಯವರು ಹೇಳುವಂತೆ "ಏನು ನಮ್ಮ ಲಿಂಗ ಮಹಿಮೆ ಸಾಮಾನ್ಯವೇ......ಗುಡಿಸಲು ಹೋಗಿ ಮಠಗಳು ಎದ್ದುವು. ...ಒಂದೇ, ಎರಡೇ, ಒಂದೊಂದೇ ಗುಡಿಸಲು ಹೋಗಿ ಮಠಗಳು ಎದ್ದು ನಿಂತವು."

ಅಧ್ಯಾಪಕರಾಗಿ ಶಿಕ್ಷಣ ಕ್ಷೇತ್ರದ ಹಸನಾಗುವಿಕೆ ಹಂಬಲಿಸಿ ಪ್ರಯತ್ನಶೀಲರಾಗುವ ಮಾವಿನಕುಳಿಯವರು ಸಾಹಿತ್ಯಕ ಕೃಷಿಯಲ್ಲೂ ಸಾಕಷ್ಟು ಸಾಫಲ್ಯ ಪಡೆದಿರುವ ಚಿಂತಕರು. ಈಚೆಗಿನ ಅವರ ಈ ನಾಟಕ ಧರ್ಮ–ರಾಜಕೀಯ–ಮಹಿಳೆ. ಹೀಗೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಸ್ಪಷ್ಟವಾದ ಆರೋಗ್ಯಕರ ನಿಲುವನ್ನು ತಾಳುವಂತಹದ್ದಾಗಿದೆ.

ನಮ್ಮ ಇಂದಿನ ವ್ಯವಸ್ಥೆಯಲ್ಲಿ ಒಂದೊಂದು ಅಪರಾಧಕ್ಕೂ ಬೇರೆ ಬೇರೆ ಸಂಸ್ಥೆಗಳು ಪರಸ್ಪರವಾಗಿ ಕುಮ್ಮಕ್ಕು ಕೊಡುತ್ತವೆ, ರಕ್ಷಣೆ ನೀಡುತ್ತವೆ. ಉದಾಹರಣೆಗೆ, ಬ್ಯಾಂಕ್ ಅಥವಾ ಸ್ಟಾಕ್ ಹಗರಣಗಳು ಕೇವಲ ಆ ಸಂಸ್ಥೆಗಳಿಗೆ ಸೀಮಿತವಲ್ಲ; ಅವುಗಳ ಹಾದಿ ಹಿಡಿಯುತ್ತಾ ಹೋದರೆ, ಉದ್ಯೋಗಪತಿಗಳು, ಸರ್ಕಾರಿ ಅಧಿಕಾರಿಗಳು, ರಾಜಕಾರಿಣಿಗಳು, ಎಲ್ಲಾ ಹಾದಿಯಲ್ಲಿ ಭೇಟಿಯಾಗುತ್ತಾರೆ! ಒಂದು ಸಂಸ್ಥೆಯು ಕಲುಷಿತಗೊಂಡು ಭಾವೋದ್ರೇಕವನ್ನು ಬಂಡವಾಳವನ್ನಾಗಿಸಿಕೊಂಡರೆ ಎಂತೆಂತಹ ವ್ಯಾಪಕ ಅನಿಷ್ಟಗಳನ್ನು ಅತಿರೇಕಗಳನ್ನು ಉಂಟುಮಾಡಬಲ್ಲುವೆಂಬುದಕ್ಕೆ ನಮ್ಮ ಕಣ್ಮುಂದೆ ಒಂದಲ್ಲ, ಹತ್ತು ನಿದರ್ಶನಗಳು ಒಮ್ಮೆಲೇ ಸಿಗುತ್ತವೆ. ಹೀಗಿರುವಾಗ ಅನೇಕ ಸಂಸ್ಥೆಗಳು ವಿಷಾನಿಲವನ್ನು ಸೂಸುತ್ತಾ ಒಂದಕ್ಕೊಂದು ಬೆಂಬಲವಾಗಿ ನಿಂತರೆ ಇನ್ನೆಂತಹ ಅನಾಹುತ ಆಗಬಹುದು! ಮಠ ರಾಜಕೀಯ, ಮತ್ತು ಪತ್ರಿಕೋದ್ಯಮಗಳು ಇದೊಂದು ಪ್ರಭಾವಿ ಸಂಸ್ಥೆಗಳು. ಒಂದೊಂದರಲ್ಲಿ ದುಷ್ಟತನ, ಮನೆ ಮಾಡಿಕೊಂಡರೆ ಸಾಕು. ಸಮಾಜದ ಗೋಡೆಗಳನ್ನು ಶಿಥಿಲಗೊಳಿಸಬಹುದು, ಮೌಲ್ಯಗಳನ್ನು ಮೆಟ್ಟಿ ನಿಲ್ಲಬಹುದು. ಅವಷ್ಟೂ ದುಷ್ಟತನದ ನೆಲೆಗಳಾದರೆ ಮತ್ತು ಸೂಕ್ಷ್ಮವಾಗಿ ಕೆಲಸ ಮಾಡಿದರೆ ಮೌಲ್ಯಗಳ ಮಾತೇ ನಿರರ್ಥಕವಾಗುವಂತಹ ಕಠಿಣ ಪ್ರಸಂಗ ನಮ್ಮನ್ನು ಕಾಡುತ್ತದೆ. ಅದು ವ್ಯಕ್ತಿ ಮತ್ತು ಸಂಸ್ಥೆಯ ದುರಂತವಾಗಿ ಮಾತ್ರ ಉಳಿಯುವುದಿಲ್ಲ, ಅದು ನಮ್ಮ ಸಾಮೂಹಿಕ ಜೀವನಾದರ್ಶನಗಳ ಕುಸಿತ ಮತ್ತು ಘೋರ ಪತನದ ಸೂಚಕಗಳಾಗುತ್ತವೆ.

ಹಾಗಾದಾಗ ಪರಿಹಾರಕ್ಕೆ ಎಲ್ಲಿ ಹೋಗಬೇಕು ? ಮಠ ಮತ್ತು ಪಾತಕ ಮನಸ್ಸು ಒಂದಾದಾಗ ಜನ ಲೆಕ್ಕಕ್ಕೆ ಬರುವುದಿಲ್ಲ. ಅವುಗಳಿಗೆ ಸ್ವಯಂ ರಕ್ಷಣೆ ಪಡೆದುಕೊಳ್ಳುವ ಕುತಂತ್ರಗಳಿಗೆ ಬಲಿಯಾದವರ ಮನಸ್ಸಿನಲ್ಲೂ ಬೇರೂರಿಬಿಡಬಹುದು !

ಇಂತಹ ಸನ್ನಿವೇಶದಲ್ಲಿ ವಸ್ತುಗಳಿಗೆ ಮತ್ತು ವ್ಯಕ್ತಿಗಳಿಗೆ ಬೆಲೆ ಭೋಗ್ಯ ಯೋಗ್ಯವೆಂಬ ಒಂದೇ ಅಳತೆಗೋಲಿನಿಂದ ಬರುವಂಥದು. ಒಬ್ಬ ಹೆಣ್ಣಿನ ಬೆಲೆಯು ಮಠಾಧೀಶನೊಬ್ಬನಿಗೆ ಅದಕ್ಕಿಂತಲೂ ಬೇರೆ ರೀತಿಯಲ್ಲಿ ಗೋಚರವಾಗದೆ ಉಳಿಯಬಹುದು, ಮಾವಿನಕುಳಿಯವರ ನಾಟಕವು ಈ ವಸ್ತುವನ್ನು ಕೆದಕಿ ನೋಡುತ್ತದೆ.

ಬಾಲ್ಯದಲ್ಲಿ ತನ್ನ ಸಮ್ಮತಿಯೇ ಇಲ್ಲದೆ "ಸ್ವಾಮಿ" ಆಗಿಬಿಡುವ ಒಬ್ಬ ವ್ಯಕ್ತಿಯಲ್ಲಿ ಯುವಕ ಸಹಜವಾದ ಭಾವನೆಗಳು ನಂತರ ಪ್ರಚೋದನೆ ಹೊಂದುತ್ತದೆಂದು ಮಠದ ಕಲ್ಮಶವನ್ನು ವಿವರಿಸಿದರೆ ಸಾಲದು; ಮಾನದ ಸಹಜವಾದ ಕ್ರಿಯೆ (ಅಥವಾ, ಮಠದ ಸಂದರ್ಭದಲ್ಲಿ, ಅಪಕ್ರಿಯೆ) ಎಂದು "ಸ್ವಾಮಿ"ಗಳಿಗೆ ಕ್ಷಮೆ ಯಾಚಿಸುವ ಕೆಟ್ಟಧೈರ್ಯ ಬರಬಹುದು, ಆದರೆ, ಭೋಗವಸ್ತುವಾಗಿ ಮಾತ್ರವೇ ಗಣನೆಗೆ ಬಂದ ಮಹಿಳೆ ಮತ್ತು ಅವಳನ್ನು ಒಳಗೊಂಡ ಸಮಾಜ ಕ್ಷಮೆ ನೀಡಬೇಕೆ? "ಸ್ವಾಮಿ"ಗಳು ಮಾನವ ಸಹಜವಾದ ಅಪರಾಧ ಎಸಗಿರಬಹುದು, ಆದರೆ ಅದರಿಂದ ಮಠದ ಅವಮಾನೀಯತೆಯು ಇಲ್ಲವಾಗುವುದಿಲ್ಲ. ಹಾಗೆ ನೋಡಿದರೆ, "ಮಾನವ ಸಹಜವಾದ ಅಪರಾಧ" ಎಸಗದಿದ್ದರೆ ಮಠದ ಸಾಂಸ್ಥಿಕ ಸ್ಥಾನ ಮತ್ತು ಮೌಲ್ಯಗಳನ್ನು ಅಂಗೀಕರಿಸಬೇಕೆ ಎಂಬ ಪ್ರಶ್ನೆಯೂ ಏಳುತ್ತದೆ. ನಾಟಕವೂ ಇಂತಹ ಹಲವು ಪ್ರಶ್ನೆಗಳನ್ನೆತ್ತುತ್ತಾ ಚಿಂತನೆಯಲ್ಲಿ ತೊಡಗಿಸುವುದು ಅದರ ವಿಸ್ತಾರವನ್ನು ಸೂಚಿಸುತ್ತದೆ. ಈ ದೃಷ್ಟಿಯಿಂದ ಶ್ರೀ ಜಯಪ್ರಕಾಶ್‌ರ "ಮಹಾಯಾತ್ರೆ" ಒಂದು ಅರ್ಥದಲ್ಲಿ ನಮ್ಮ ಬೌದ್ಧಿಕ ಮತ್ತು ಕ್ರಿಯಾಶೀಲತೆಯ ಯಾತ್ರೆಗೆ ಇಂಬು ಕೊಡುವಂತಹ ಒಂದು ಸಮರ್ಥ ಸ್ವಾಗತಾರ್ಹ ಕೃತಿ. ನಾಟಕಕಾರರೇ ಕೊನೆಯಲ್ಲಿ ಸೂಚಿಸಿರುವಂತೆ ಹತಾಶೆಯೇ ಅಂತಿಮವಾದ ಫಲವಲ್ಲ. "ನಾವು ವಸ್ತು ಅಲ್ಲಾ ರಿ...ನಮಗೂ ಮನಸ್ಸಿದೆ...ಹೃದಯವಿದೆ. ... ನಾವು ಹೃದಯವಂತ ಮನುಷ್ಯರು ... ನಾವು ಮನುಷ್ಯರು," ಎಂಬ ಕಮಲಮ್ಮನ ಕಡೆಯ ಮಾತುಗಳು ಮಹಿಳೆಯ (ಮತ್ತು ಮಾನವನ) ಮನಸ್ಸು ಭಗ್ನಾಶೇಷವಲ್ಲವೆಂಬ ಧೈರ್ಯ ಮತ್ತು ಆಶಯವನ್ನು ಎತ್ತಿ ಹಿಡಿಯುತ್ತವೆ. ಆದ್ದರಿಂದಲೇ ಮಸೀದಿಯ ಅವಶೇಷಗಳಡಿಯಲ್ಲಿ ಮನುಷ್ಯತ್ವ ಸಂಪೂರ್ಣವಾಗಿ ನಾಶವಾಗಿಹೋಗುವುದಿಲ್ಲವೆಂಬ ಧೋರಣೆಗೆ ಅರ್ಥ ಯಾವೊತ್ತೂ ಇರುತ್ತದೆ, ದುಷ್ಕೃತ್ಯಗಳ ಪರಿಣಾಮವಾದ ಅವಹೇಳನ ಮತ್ತು ಅವಶೇಷಗಳ ಮೇಲೆ ಮಾನವತೆಯ ಸುಂದರ ಮಂದಿರ ಕೇವಲ ಕನಸಾಗಿ ಉಳಿಯಬೇಕಾಗಿಲ್ಲ. ದುಷ್ಟಕೂಟವನ್ನು ನಾಟಕದಲ್ಲಿ ಧಿಕ್ಕರಿಸುವ ಕಮಲಮ್ಮ ಜನರ ಆಶೋತ್ತರ ಹಾಗೂ ಕ್ರಿಯಾಶಕ್ತಿಗೆ ಪ್ರತಿನಿಧಿಯಾಗುತ್ತಾಳೆ. ಅಂತಹ ಚಿತ್ರಣದಿಂದಾಗಿ ಪ್ರಸ್ತುತ ನಾಟಕಕಾರರು ಅಭಿನಂದನೀಯರು.

—ಜಿ. ರಾಮಕೃಷ್ಣ

'ಅಚಲ' ಹೊಸ ವರ್ಷ ಮಾರ್ಚ್‌ನಲ್ಲಿ ಆರಂಭ.

ಇಂದೇ ಚಂದಾದಾರರಾಗಿ.

ಆಂಧ್ರದ ಮಹಿಳಾ ಪತ್ರಿಕೆ – 19 ನೇ ಶತಮಾನದಲ್ಲಿ

ಆಂಧ್ರ ಪ್ರದೇಶದಲ್ಲಿ 19ನೇ ಶತಮಾನದ ಅಂತ್ಯ ಮತ್ತು 20ನೇ ಶತಮಾನದ ಆದಿ ಭಾಗದ ಮಹಿಳಾ ಪತ್ರಿಕೆಗಳ ಅವಲೋಕನ ಮಾಡಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಪ್ರದೇಶದಲ್ಲಿ ಸಾಮಾಜಿಕ, ಮತ್ತು ಧಾರ್ಮಿಕ ಚಳವಳಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳು ಅದೇ ಕಾಲದ ಸುಧಾರಣಾ ಚಳವಳಿಗೆ ಹೇಗೆ ಸ್ಪಂದಿಸಿದುವೆಂಬುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ. ಈ ಕಾಲದಲ್ಲಿ ಕತೆ, ರಸವತ್ತು, ಕಾದಂಬರಿ, ನಾಟಕ, ಮತ್ತು ಪ್ರಬಂಧಗಳ ಮೂಲಕ ತೆಲುಗು ಸಾಹಿತ್ಯದಲ್ಲಿ ಅಭಿವ್ಯಕ್ತಿಯು ಹೊಸ ರೀತಿ ರೂಪಗೊಳ್ಳುತ್ತಿತ್ತು. ಸುಧಾರಣಾ ವಿಚಾರಧಾರೆ ಅಭಿವ್ಯಕ್ತಿಗೆ ಅವು ಪ್ರಬಲ ಮಾಧ್ಯಮಗಳಾದವು. ಅಲ್ಲದೆ ಸುದಾರಣಾ ಮತ್ತು ಸೌಮ್ಯವಾದಿಗಳು ಸಾಹಿತ್ಯದ ಈ ಪ್ರಕಾರಗಳನ್ನು ಹೆಚ್ಚು ಬಳಸತೊಡಗಿದ್ದೂ ಅವು ಶಕ್ತಿಶಾಲಿಯಾಗಲು ಕಾರಣವಾಯಿತು. ಜತೆಗೆ ತೆಲುಗಿನ ಪ್ರಬಂಧ ಶೈಲಿಯು ಗ್ರಾಂಥಿಕರಿಂದ ವ್ಯವಹಾರಿಕಕ್ಕೆ ಆರೋಗ್ಯ ಪೂರ್ಣ ಬದಲಾವಣೆ ಹೊಂದಿದ್ದು ಇದೇ ಸಮಯಕ್ಕೆ. ವಿದ್ಯಾವಂತ ಮಧ್ಯಮವರ್ಗದ ಜನರು ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದ ಸಮಯದಲ್ಲಿ ಈ ಬದಲಾವಣೆ ಭಾಷೆಯು ಪ್ರಜಾಸತ್ತಾತ್ಮಕವಾಗತೊಡಗಿದರ ಸಂಕೇತವಾಗಿದೆ.

ಭಾಷೆ ಮತ್ತು ಸಾಹಿತ್ಯದಲ್ಲಿ ಉಂಟಾಗುತ್ತಿದ್ದ ಬದಲಾವಣೆಯ ಸಂದರ್ಭದಲ್ಲಿ ಆಂಧ್ರದ ಪತ್ರಿಕೆಗಳ ಬೆಳವಣಿಗೆಯನ್ನು (19 ನೇ ಶತಮಾನದಲ್ಲಿ) ಗುರುತಿಸಬೇಕಾಗಿದೆ. ಈ ಕಾಲದಲ್ಲಿ ದೇಶದ ಅನೇಕ ಭಾಗಗಳಲ್ಲಿ ಭಾಷಾಪತ್ರಿಕೆಗಳ ಉಗಮವನ್ನು ನೋಡಬಹುದಾಗಿದೆ. ತೆಲುಗು ಪತ್ರಿಕೋದ್ಯಮ ಇದಕ್ಕೆ ಹೊರತಾಗಿಲ್ಲ. 1880 ರ ದಶಕ ಇದಕ್ಕೆ ಮುಡುಪಾಯಿತೆಂದು ಹೇಳಬಹುದು. ತೆಲುಗು ಮುದ್ರಣದ ಮೊದಲ ಚಟುವಟಿಕೆ ಮದ್ರಾಸಿನ ಕಾಲೇಜ್ ಆಫ್ ಫೋರ್ಟ್ ಸೆಂಟ್ ಜಾರ್ಜ್ (ಸ್ಥಾಪನೆ 1812) ಜತೆಗೆ ಸೇರಿಸಿದೆ. ಪ್ರೆಸಿಡೆನ್ಸಿಯ

ವಿ. ರಾಮಕೃಷ್ಣ

ಭಾಷಾ ವಿಭಾಗಕ್ಕೆ ಸಿವಿಲ್ ಅಧಿಕಾರಿಗಳನ್ನು ತರಬೇತುಗೊಳಿಸಲು ಈ ಕಾಲೇಜನ್ನು ಪ್ರಾರಂಭಿಸಲಾಯಿತು. ಒಂದು ಮುದ್ರಣಾಲಯ, ಪುಸ್ತಕದ ಅಂಗಡಿ ಮತ್ತು ಗ್ರಂಥಾಲಯವನ್ನು ಕಾಲೇಜಿಗೆ ಸೇರಿಸಲಾಯಿತು. ಮಿಷಿನರಿ ಚಟುವಟಿಕೆಗಳ ಹಿನ್ನೆಲೆಯಲ್ಲಿ ಮದ್ರಾಸಿನಲ್ಲಿ ಮುದ್ರಣಾಲಯಗಳ ಸಂಖ್ಯೆ ಅಧಿಕಗೊಂಡು ಹೊಸ ಪತ್ರಿಕೆಗಳ ಆರಂಭಕ್ಕೆ ಹೆಚ್ಚಿನ ಸೌಲಭ್ಯದೊರೆಯಿತು.

ಮದ್ರಾಸಿನಿಂದ 1838 ರಲ್ಲಿ ಪ್ರಕಟಗೊಂಡ 'ವೃತ್ತಾಂತಿನಿ'ಯು ಈಗ ತಿಳಿದಿರುವ ಮೊದಲ ತೆಲುಗು ಪತ್ರಿಕೆಯಾಗಿದೆ. 1842 ರವರೆಗೆ ಅದರ ಪ್ರಕಟಣೆ

ಮುಂದುವರಿಯಿತೆಂಬುದನ್ನು ಒಪ್ಪಿಕೊಳ್ಳಲಾಗಿದ್ದರೂ ಈ ಪತ್ರಿಕೆಯ ಬಗೆಗೆ ಹೆಚ್ಚಿನ ವಿವರ ತಿಳಿದು ಬಂದಿಲ್ಲ. 1842 ರಲ್ಲಿ ಮದ್ರಾಸಿನಲ್ಲಿ ಆರಂಭವಾದ 'ವಾರ್ತಾಮಾನ ತರಂಗಿಣಿ'ಯಲ್ಲಿ 'ವೃತ್ತಾಂತಿನಿ' ಬಗೆಗೆ ಪ್ರಸ್ತಾಪವಿದೆ. ನಂತರ ಹಿತವಾದಿ (1862), ದಿನವಾರ್ತಾಮಣಿ (1862), ಶ್ರೀಯಕ್ಷಿಣಿ (1863), ತತ್ವಭೋದಿನಿ (1864), ಸುಜನರಂಜನಿ (1864), ಆಂಧ್ರ ಭಾಷಾ ಸಂಜೀವಿನಿ (1871) ಮತ್ತು ಪುರುಷಾರ್ಥ ಪ್ರದಾಯಿನಿ (1872) ಪತ್ರಿಕೆಗಳು ಬೆಳಕು ಕಂಡವು. ಧಾರ್ಮಿಕ ಮತ್ತು ಸಾಹಿತ್ಯಿಕ ವಿಷಯಗಳಿಗೆ ಹೆಚ್ಚಿನ ಸ್ಥಾನ ದೊರೆಯುತ್ತಿತ್ತು. ಆದರೆ ಆಗಾಗ್ಗೆ ಸಾರ್ವಜನಿಕ ಮತ್ತು ರಾಜಕೀಯ ವಿಷಯಗಳು ಪತ್ರಿಕೆಗಳಲ್ಲಿ ಕಾಣಸಿಗುತ್ತಿದ್ದವು. ವೀರೇಶಲಿಂಗಂ ಅವರ 'ವಿವೇಕವರ್ಧನಿ' ನಂತರ ಪ್ರಕಟಗೊಂಡ 'ಪುರುಷಾರ್ಥಪ್ರದಾಯಿನಿ' ಯು ತೆಲುಗು ಪತ್ರಿಕೋದ್ಯಮದಲ್ಲಿ ಗಮನಾರ್ಹ ಹೆಜ್ಜೆ ಮೂಡಿಸಿತು. ಪೂರ್ಣ ಪ್ರಮಾಣದ ಈ ಪತ್ರಿಕೆಯನ್ನು ಮಚಲಿಪಟ್ಟಣದಿಂದ ಪ್ರಕಟಿಸಲಾಗುತ್ತಿತ್ತು. ಜಾತಿ ವ್ಯವಸ್ಥೆ, ವಿಧವಾ ವಿವಾಹ ನಿಷೇಧದಂಥ ಸಾಮಾಜಿಕ ಸಮಸ್ಯೆಗಳ ಬಗೆಗೆ ಪತ್ರಿಕೆಯು ಹರಿತವಾಗಿ ಟೀಕಿಸುತ್ತಿತ್ತು. ಇದೊಂದು ಪ್ರಗತಿ ಪರವಾದ ಪತ್ರಿಕೆಯಾಗಿತ್ತು.

ವೀರೇಶಲಿಂಗಂ ಅವರ 'ವಿವೇಕವರ್ಧನಿ' 1874ರ ಅಕ್ಟೋಬರ್‌ನಲ್ಲಿ ಇತಿಹಾಸ ಸೃಷ್ಟಿಸುವ ತನ್ನ ವೃತ್ತಿಯನ್ನು ಆರಂಭಿಸಿತು. ರಾಜಮಂಡ್ರಿಯಿಂದ ಪ್ರಕಟಗೊಳ್ಳುತ್ತಿದ್ದ ಈ ಪಕ್ಷಿಕವು ಕೆಲ ಸಮಯ ಮದ್ರಾಸಿನಲ್ಲಿ ಮುದ್ರಣಗೊಳ್ಳುತ್ತಿತ್ತು. ನಂತರ ಮುದ್ರಣ ರಾಜಮಂಡ್ರಿಗೇ ವರ್ಗಾವಣೆಯಾಯಿತು. ವಿವೇಕವರ್ಧನಿಯ ಪ್ರಕಟಣೆಯಿಂದ ತೆಲುಗು ಪತ್ರಿಕೋದ್ಯಮವು ಒಂದು ರೀತಿಯಲ್ಲಿ ಪ್ರೌಢಾವಸ್ಥೆ ಮತ್ತು ಜವಾಬ್ದಾರಿಯುತ ಹಂತವನ್ನು ಮುಟ್ಟಿತೆಂದು ಹೇಳಬಹುದು.

ಆಂಧ್ರ ಪ್ರಕಾಶಿಕ (1885), ಹಿಂದೂ ಜನ ಸಂಸ್ಕರಣಿ (1885) ಸತ್ಯ ಸಂವರ್ಧನಿ (1891), ಶಶಿಲೇಖಾ (1894) ದೇಶಾಭಿಮಾನಿ (1896) ಇವೇ ಮುಂತಾದ ಪತ್ರಿಕೆಗಳು 19ನೇ ಶತಮಾನದಲ್ಲಿ ಹೊರಬಂದವು. ಈ ಎಲ್ಲ ಪತ್ರಿಕೆಗಳು ಸಾಮಾಜಿಕ ಪಿಡುಗಿನ ವಿರುದ್ಧ ಧರ್ಮಯುದ್ಧ ನಡೆಸಿದವು. ಮುಖ್ಯವಾಗಿ ಮಹಿಳೆಯರ ಸಮಸ್ಯೆಗಳತ್ತ ಹೆಚ್ಚಿನ ಗಮನಹರಿಸಿ ಅವುಗಳ ನಿವಾರಣೆಗೆ ಪ್ರಯತ್ನ ನಡೆಸಿದವು. ಸುಧಾರಣಾ ಚಟುವಟಿಕೆಗಳ ಬಗೆಗೆ ವರದಿ ಪ್ರಕಟಿಸುವುದರ ಜತೆಗೆ ಮಹಿಳೆಯರ ಸಮಸ್ಯೆ ಕುರಿತಂತೆ ಲೇಖನ ಮತ್ತು ಟೀಕೆ-ಟಿಪ್ಪಣಿ ಪ್ರಕಟಿಸಲಾಗುತ್ತಿತ್ತು. ನೀರಾವರಿ, ಭೂ ಕಂದಾಯ, ಶಿಕ್ಷಣ, ಸಾರ್ವಜನಿಕ ಆರೋಗ್ಯ ಮತ್ತಿತರ ಜನ ಹಿತಾಸಕ್ತಿ ವಿಷಯದ ಬಗೆಗೂ ಈ ಪತ್ರಿಕೆಗಳು ಬೆಳಕು ಚೆಲ್ಲುತ್ತಿದ್ದವು. ಜಿಲ್ಲಾ ಸಮ್ಮೇಳನಗಳ ವರದಿ ಪ್ರಕಟವಾಗುತ್ತಿದ್ದವು. ಅವು ವಿಪುಲ ಮಾಹಿತಿ ಒದಗಿಸುವಂಥವು.

ರಾಜ ಮಂಡ್ರಿಯಿಂದ 1883ರಲ್ಲಿ ಪ್ರಕಟಣೆ ಆರಂಭಿಸಿದ 'ಸತಿಹಿತ ಬೋಧಿನಿ' ಯು ಸಂಪೂರ್ಣವಾಗಿ ಮಹಿಳೆಯರಿಗಾಗಿಯೇ ಮೀಸಲಾದ ಪತ್ರಿಕೆ. ಅಂದಿನ ಸಾಮಾಜಿಕ ಚಳವಳಿಯ ಹಿನ್ನೆಲೆಯಲ್ಲಿ ಇದೊಂದು ಸ್ವಾಗತಾರ್ಹ ಬೆಳವಣಿಗೆ ಎನ್ನಬಹುದು. ಈ ಕಾಲದಲ್ಲಿ ಚಳವಳಿ ತೀವ್ರವಾಗಿತ್ತು. ಹೀಗಾಗಿ ವೀರೇಶಲಿಂಗಂ ಈ ಪತ್ರಿಕೆಯನ್ನು ಆರಂಭಿಸಿದ್ದುದರಲ್ಲಿ ಏನೂ ಆಶ್ಚರ್ಯವಿಲ್ಲ. ಕೆಲವು ಸಂಚಿಕೆಗಳನ್ನು ಬಿಟ್ಟರೆ ಈ ಪತ್ರಿಕೆಯ ಎಲ್ಲ ಸಂಚಿಕೆಗಳು ಸಿಗುವುದಿಲ್ಲ. ಆದರೆಪತ್ರಿಕೆಯಲ್ಲಿ ಪ್ರಕಟವಾಗಿದ್ದ ಅನೇಕ ಪ್ರಮುಖ ಲೇಖನಗಳನ್ನು ವೀರೇಶಲಿಂಗಂ ಅವರ ಪೂರ್ಣಕೃತಿ ಗ್ರಂಥಗಳಲ್ಲಿ ಪ್ರಕಟಿಸಲಾಗಿದೆ. ಪತ್ರಿಕೆಯ ಮುಖಪುಟದಲ್ಲಿ ಒಂದು ಶ್ಲೋಕವನ್ನು ಮುದ್ರಿಸಲಾಗುತ್ತಿತ್ತು, ಅದರ ಅರ್ಥ ಇಂತಿದೆ : ತಮ್ಮ ಗಂಡಂದಿರ ಬಲಾತ್ಕಾರದಿಂದ ಮನೆ ಒಳಗೇ ಉಳಿಯುವ ಮಹಿಳೆಯರಿಗೆ ಸರಿಯಾದ ರಕ್ಷಣೆ ಇಲ್ಲ,

ತಮ್ಮನ್ನು ತಾವು ನೋಡಿಕೊಳ್ಳುವ ಮಹಿಳೆಯರು ಹೆಚ್ಚು ಸುರಕ್ಷಿತ.

ಅಂದಿನ ಪರಿಸ್ಥಿತಿಯಲ್ಲಿ ಸ್ತ್ರೀ-ಪುರುಷರ ಅರಿವಿನ ಹಿನ್ನಲೆಯಲ್ಲಿ ಈ ಮಾತು ಪ್ರಗತಿಪರ ಘೋಷಣೆ ಎಂದೇ ಹೇಳಬಹುದು. ಪ ರೋಕ್ಷವಾಗಿ ಪರಾವಲಂಬಿಗಳಾಗಬೇಡಿ, ಸ್ವಾವಲಂಬಿಗಳಾಗಿ ಎಂದು ಮಹಿಳೆಗೆ ಹೇಳುವ ಕಿವಿಮಾತು ಇದಾಗಿದೆ. ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದರೆ ಪತ್ರಿಕೆಗಳಲ್ಲಿ ವಿಷಯವು ಮಹಿಳಾ ಶಿಕ್ಷಣ, ನೀತಿಕತೆ, ಮನೆ ನೋಡಿಕೊಳ್ಳುವ ರೀತಿ ಮತ್ತು ಕೆಲವು ಸಾಹಿತ್ಯಿಕ ಅಂಶಗಳನ್ನ ಒಳಗೊಂಡಿದ್ದು ಸ್ಪಷ್ಟವಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಗಮನಾರ್ಹ ಅಂಶವೆಂದರೆ ಲೇಖನಗಳ ಮೂಲಕ ಮಹಿಳಾ ಆರೋಗ್ಯ, ಶಿಶುಪಾಲನೆಯಂಥ ಪ್ರಾಥಮಿಕ ವಿಜ್ಞಾನದ ಬಗೆಗೆ ಮಹಿಳೆಯರಲ್ಲಿ ಅರಿವು ಉಂಟುಮಾಡುವ ಪ್ರಯತ್ನ ನಡೆದುದು, ಜತೆಗೆ ಈ ಲೇಖನಗಳನ್ನು ಹೆಚ್ಚು ಕಮ್ಮಿ ಬರೆದವರು ಪುರುಷರೇ, ಮುಖ್ಯವಾಗಿ ವೀರೇಶಲಿಂಗಂ ಅವರೇ ಲೇಖಕರು. ಸುಧಾರಣೆ ಹಾಗೂ ಪತ್ರಿಕೋದ್ಯಮದಲ್ಲಿ ಮಹಿಳೆಯರು ಇನ್ನೂ ಕ್ರಿಯಾಶೀಲರಾಗಿಲ್ಲದ್ದ ಸಮಯವದು, ಎಂಬುದನ್ನು ಮರೆಯಲಾಗದು. 1901ರಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವು ಶೇಕಡ 0.48.

'ಸತಿಹಿತಬೋಧಿನಿ'ಯು 1885ರಲ್ಲಿ ಕಣ್ಮುಚ್ಚಿತು. ಆದರ 1888ರಲ್ಲಿ ಮತ್ತೆ ಅದನ್ನು ಪುನರಾರಂಭಿಸಲಾಯಿತು, ತದನಂತರ "ತೆಲುಗು ಜೆನಾನಾ" ಮಾಸಿಕ ಪತ್ರಿಕೆ ಜತೆ ವಿಲೀನಗೊಂಡಿತು.

ಆಂಧ್ರದ 19ನೇ ಶತಮಾನದ ಅಂತ್ಯ ಭಾಗದ ಮಧ್ಯಮ ಮತ್ತು ಮೇಲ್ವರ್ಗದ ಮಹಿಳೆಯರಿಗಾಗಿಯೇ 1893ರಲ್ಲಿ ಆರಂಭವಾದ 'ತೆಲುಗು ಜೆನಾನಾ' ಮಾಸಿಕ ಪತ್ರಿಕೆ. ಮಹಿಳೆಯರ ಶಿಕ್ಷಣ, ಅರಿವು, ಮತ್ತು ವಿವೇಚನೆಯಂಥ ಗುರಿ ಹೊತ್ತ ಪತ್ರಿಕೆಯ ಉದ್ದೇಶ ದೂರವೇ ಉಳಿದಿರುವ ಮಹಿಳೆಯರನ್ನು ಮುಟ್ಟುವುದಾಗಿತ್ತು. ಮಹಿಳೆಯರಲ್ಲಿನ ಅಸಹಾಯಕತನ ಹಾಗೂ ಮೂಢನಂಬಿಕೆ ತೊಡೆಯಲು ಶಿಕ್ಷಣವೊಂದೇ ಮಾರ್ಗ ಎಂದು 19ನೇ ಶತಮಾನದ ಸುಧಾರಣಾವಾದಿಗಳು ಬಲವಾಗಿ ನಂಬಿದ್ದರು. ಹೀಗಾಗಿ ಅನೇಕ ಮಹಿಳಾ ಪತ್ರಿಕೆಗಳು ಅದಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದವು. ಸದ್ಗುಣ ಮತ್ತು ಒಳ್ಳೆಯ ನಡತೆ ಬಗೆಗೂ ಬೋಧನೆ ಇರುತ್ತಿತ್ತು. ನಡತೆ ಎಂದರೆ ನೈತಿಕ ಪ್ರಶ್ನೆಯಲ್ಲ. ಹೊಂದಾಣಿಕೆ ಹಾಗೂ ಕುಟುಂಬದೊಳಗೆ ಮುಖ್ಯವಾಗಿ ಬಾಳಸಂಗಾತಿ ಜತೆಗಿರಬೇಕಾದ ಬಾಂಧವ್ಯದ ಬಗೆಗೆ ತಿಳುವಳಿಕೆ ಕೊಡಲಾಗುತ್ತಿತ್ತು.

'ತೆಲುಗು ಜೆನಾನಾ'ವು ಸ್ಫೂರ್ತಿದಾಯಕ ಸಂಪಾದಕೀಯ ಹಾಗೂ ವ್ಯಾಪಕ ವಿಷಯಗಳಿಗೆ ಹೆಸರಾಗಿತ್ತು. ಅದು ಮಹಿಳಾ ಚಟುವಟಿಕೆ, ವಿಷಯಗಳ ಮತ್ತು ವಿವಾದಕ್ಕೆ ಕೇಂದ್ರಬಿಂದುವಾಗಿತ್ತು. ಅನೇಕ ಮಹಿಳೆಯರು ಈ ಪತ್ರಿಕೆಗೆ ಬರೆಯುವ ಮೂಲಕ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡುದಲ್ಲದೆ ಮುಂದೆ ಹೆಸರಾಂತ ಲೇಖಕಿಯರೂ ಆದರೂ ; ತಾವೂ ಸ್ವತಃ ಪತ್ರಿಕೆಗಳನ್ನು ಆರಂಭಿಸುವಷ್ಟಾದರು.

ರಪಕ ಕೌಸ್ತುಭಂ ಅವರು 1893ರಲ್ಲಿ ಕಾಕಿನಾಡದಲ್ಲಿ 'ಸ್ತ್ರೀಹಿತ ಬೋಧಿನಿ' ಎಂಬ ಪತ್ರಿಕೆ ಆರಂಭಿಸಿದ್ದಕ್ಕೆ ಪುರಾವೆಗಳಿವೆ. ಆದರೆ ಇದರ ಪತ್ರಿಕೆಗಳಾವುವೂ ಸಿಗುತ್ತಿಲ್ಲ. ಶ್ರೀಕಾಕುಳಂನಿಂದ 1896 ರಲ್ಲಿ ಆರಂಭವಾದ 'ಶ್ರೀ ಬಾಲಿಕಾ'ಗೆ ಸಂಗೀತರಾವ್ ಬಾಪಿರಾಜು ಸಂಪಾದಕರಾಗಿದ್ದರು.

ಶತಮಾನದ ಅಂತ್ಯದ ವೇಳೆಗೆ ತೆಲುಗು ಪತ್ರಿಕೋದ್ಯಮದ ಗಾಳಿಯು ಬದಲಾವಣೆಗೊಂಡು ಧ್ವನಿ ಹೆಚ್ಚು ರಾಜಕೀಯವಾಗತೊಡಗಿತು. ರಾಷ್ಟ್ರೀಯ ಚಳವಳಿ

ಹಾಗೂ ರಾಜಕೀಯ ಪತ್ರಿಕೆಗಳ ಉಗುಮವು ಆಂಧ್ರದ ಸಾಮಾಜಿಕ ಚಳುವಳಿಯ ಪ್ರಭಾವವನ್ನು ಸ್ವಲ್ಪಮಟ್ಟಿಗೆ ಮರೆಮಾಡಿದ್ದೇನೋ ಹೌದು, ಪ್ರಕಾಶಕರಿಗಿಂತ ಸಂಪಾದಕರ ಪಾತ್ರ ಮಹತ್ವವಾಗತೊಡಗಿತು. ಪತ್ರಿಕೆಗಳ ಬಗೆಗೆ ರಾಜಕೀಯ ಗುಂಪುಗಳು ಆಸಕ್ತಿ ತೋರತೊಡಗಿದವು. ಹೊಸ ದಿಕ್ಸೂಚಿಗೆ ಅನುಗುಣವಾಗಿ ರಾಜಕೀಯ ಮತ್ತು ಸಾಮಾಜಿಕ ವಿಷಯಗಳಿಗೆ ಹೆಚ್ಚು ಮಹತ್ವ ದೊರೆಯಿತು. ಆದರೂ ಮಹಿಳೆಯರಿಗಾಗಿ ಪತ್ರಿಕೆ ಆರಂಭಿಸುವ ಕೆಲವರ ಪ್ರಯತ್ನಕ್ಕೇನೂ ಅದು ತಡೆ ಒಡ್ಡಲಿಲ್ಲ.

ಮಹಿಳೆಯ ಪತ್ರಿಕೆ

ಇಪ್ಪತ್ತನೆಯ ಶತಮಾನದ ಆರಂಭವು ಶುಭ ಸೂಚನೆಯನ್ನೇ ನೀಡಿತು. ಮಹಿಳೆಯರಿಗಾಗಿ ಮೊದಲ ಬಾರಿಗೆ ಮಹಿಳಾ ಸಂಪಾದಕರೊಬ್ಬರು ಹೊರ ತಂದ 'ಹಿಂದೂ ಸುಂದರಿ' ಪತ್ರಿಕೆ ಕಾಕಿನಾಡದಲ್ಲಿ 1902ರಲ್ಲಿ ಬೆಳಕು ಕಂಡಿತು. ಮೊಸಲಕಾಂತಿ ರಮಾಬಾಯಿ ಅದರ ಸಂಪಾದಕಿ. ಕೆಲವು ಅಡೆ, ತಡೆ ಬಿಟ್ಟರೆ ಇದು 1945ರ ವರೆಗೂ ಪ್ರಕಟವಾಗುತ್ತಿತ್ತು. ಸಾಮಾನ್ಯ ಆಸಕ್ತಿಯ ಕತೆ, ಪದ್ಯದ ಮೂಲಕ ಜನಪ್ರಿಯ ಸಾಹಿತ್ಯ, ಪ್ರಚಾರ ಈ ಪತ್ರಿಕೆಯ ಹೆಗ್ಗಳಿಕೆ.

ಏಲೂರಿನಿಂದ 1903ರಲ್ಲಿ ಪ್ರಕಟಗೊಂಡ 'ಗೃಹಲಕ್ಷ್ಮಿ' ಯು ತೆಲುಗಿನ ಪ್ರಥಮ ಸಚಿತ್ರ ಪತ್ರಿಕೆ. ಮಕ್ಕಳಿಗಾಗಿ ಕೆಲವು ಪುಟ ಮೀಸಲಿಟ್ಟ ಪತ್ರಿಕೆ ಇದು.

ಕಾಕಿನಾಡದಲ್ಲಿ 1904ರಲ್ಲಿ ಬೆಳಕುಕಂಡ' ಸಾವಿತ್ರಿ' ಯ ಸಂಪಾದಕಿ ಪುಲುಗುತನ ಲಕ್ಷ್ಮೀನರಸಮಾಂಬ. ವೀರೇಶಲಿಂಗಂ ಅವರಪ್ರಭಾವದಿಂದ ಚಳವಳಿಯಲ್ಲಿ ತೊಡಗಿಸಿಕೊಂಡ ಕೆಲವೇ ಮಹಿಳೆಯರಲ್ಲಿ ಲಕ್ಷ್ಮೀನರಸಮಾಂಬ ಒಬ್ಬರು. ಮಹಿಳಾ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಅವರು, ಆ ಕಾಲದಲ್ಲಿಯೇ ಕಾಕಿನಾಡದಲ್ಲಿ ವಿದ್ಯಾರ್ಥಿನಿಯರನ್ನು ಸಂಘಟಿಸಿದ್ದರು. ಮಹಿಳಾ ಪತ್ರಿಕೋದ್ಯಮಕ್ಕೆ 'ಸಾವಿತ್ರಿ'ಯ ಕೊಡುಗೆ ಅಪಾರ. ಮೊದಲ ಬಾರಿಗೆ ಅನೇಕ ಮಹಿಳೆಯರ ಲೇಖನಗಳಿಗೆ ಇಲ್ಲಿ ಸ್ಥಳ ದೊರೆಯಿತು. ಸಾಮಾಜಿಕ ಚಳವಳಿಯ ನೇತಾರನಾಗಿದ್ದ 'ಸಾವಿತ್ರಿ'ಯು ಪರಿಪೂರ್ಣ ಪತ್ರಿಕೆ ಎಂದೆನಿಸಿಕೊಂಡಿತು.

ಕ್ರೈಸ್ತ ಮಿಷನರಿಗಳ ಎರಡು ಮಹಿಳಾ ಪತ್ರಿಕೆಗಳ ಬಗೆಗೆ ಉಲ್ಲೇಖ ಅಗತ್ಯ. 'ವಿವೇಕವತಿ' (1908) ಮತ್ತು 'ಇಂಟಿಮೇಷನ್ಸ್ ಟು ವುಮೆನ್' (1912)ಎಂಬ ಈ ಪತ್ರಿಕೆಗಳು ಮಹಿಳೆಯರಲ್ಲಿ ಅರಿವು ಮೂಡಿಸುವ ಯತ್ನದ ಜತೆಗೆ ಕ್ರೈಸ್ತರ ಅಭಿಪ್ರಾಯಗಳನ್ನು ಬಿಂಬಿಸುತ್ತಿದ್ದುವು.

ಕಾಕಿನಾಡದಿಂದ ಪ್ರಕಟಗೊಂಡ 'ಅನಸೂಯ' (1914) ವು 'ಸಾವಿತ್ರಿ' ಪರಂಪರೆಯನ್ನೇ ಅನುಸರಿಸಿತು. ವಿಂಜಮೂರಿ ವೆಂಕಟರಮಣಮ್ಮ ಇದರ ಸಂಪಾದಕಿ. ಮಹಿಳಾ ಹೋರಾಟಕ್ಕೆ ಪೂರ್ಣ ಬೆಂಬಲ ನೀಡಿದ್ದ 'ಅನಸೂಯ' ಮಹಿಳೆಯರಲ್ಲಿ ಜ್ಞಾನಶಕ್ತಿ ಬೆಳೆಯಲು ಪ್ರಯತ್ನಿಸಿತ್ತು. ಕೆಲವು ಸಾಹಿತ್ಯಕ ಕೃತಿಗಳ ಬಗ್ಗೆ ಮಹಿಳೆಯರಿಗೆ ಪರೀಕ್ಷೆಗಳನ್ನು ನಡೆಸಿತ್ತು.

ಮದ್ರಾಸಿನಲ್ಲಿ ಸ್ತ್ರೀ ಧರ್ಮ ಮತ್ತು (1917) ಸೌಂದರ್ಯವಲ್ಲಿ (1919) ಆರಂಭಗೊಂಡಿತು. ಕ್ರಮವಾಗಿ ಮಾಲತಿ ಪಟವರ್ಧನ್ ಮತ್ತು ಗಡಿಚೆರ್ಲ ರಮಾಬಾಯಿ ಅವುಗಳ ಸಂಪಾದಕರು. 1883 ರಿಂದ 1919 ರವರೆಗಿನ ಕಾಲವು, 'ಸತಿಹಿತ ಬೋಧಿನಿ'ಯಿಂದ 'ಸೌಂದರ್ಯವಲ್ಲಿ'ವರೆಗೆ ತೆಲುಗಿನಲ್ಲಿ ಮಹಿಳಾ ಪತ್ರಿಕೋದ್ಯಮದ ಪ್ರಮುಖ ಹಂತವಾಗಿದೆ. ಸುಮಾರು 10 ಪತ್ರಿಕೆಗಳು ಆರಂಭಗೊಂಡವು. ಕೆಲವು ಪುರುಷರ ಸಂಪಾದಕತ್ವದಲ್ಲಿ ಕೆಲವು ಮಹಿಳೆಯರ ಸಂಪಾದಕತ್ವದಲ್ಲಿ ಜನರ ಕೈ ಮುಟ್ಟಿದವು. ಆಂಧ್ರ ಲಕ್ಷ್ಮೀ, ಹಿಂದೂ ಯುವತಿ, ಭಾರತ ಮಹಿಳಾ, ಗೃಹಲಕ್ಷ್ಮೀ, ವಿಶ್ವ

ಜ್ಞಾನಿ, ಯಶೋದ, ಆಂಧ್ರ ಮಹಿಳಾ ಇವೇ ಮುಂತಾದ 12 ಪತ್ರಿಕೆಗಳು 1920–1947 ರ ಅವಧಿಯಲ್ಲಿ ಬೆಳಕು ಕಂಡವು. ರಾಷ್ಟ್ರೀಯ ಚಳುವಳಿಯು ಹೆಚ್ಚು ತೀವ್ರವಾಗತೊಡಗಿದ್ದರಿಂದ, ಅವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಚ್ಚು ಮಹಿಳೆಯರು ಪಾಲ್ಗೊಳ್ಳಬೇಕೆಂದು ವಾದಿಸುತ್ತಿದ್ದವು. ಮಹಿಳಾ ಸ್ವಾತಂತ್ರ್ಯ ಹಾಗೂ ದೇಶದ ರಾಜಕೀಯ ಬೆಳವಣಿಗೆ ಬಗೆಗೆ ಪತ್ರಿಕೆಗಳಲ್ಲಿ ಚರ್ಚಿಸಲಾಗುತ್ತಿತ್ತು. ಸ್ವಾತಂತ್ರ್ಯ ಚಳುವಳಿಗಳಲ್ಲದೇ ಪ್ರತ್ಯೇಕ ಆಂಧ್ರ ಪ್ರಾಂತ್ಯ ರಚನೆಗೆ ಒತ್ತಾಯಿಸುವ ಆಂದೋಲನ ರೂಪುಗೊಂಡ ಕಾಲವದು. ಹೆಚ್ಚು ಮಹಿಳೆಯರೂ ಪಾಲ್ಗೊಳ್ಳುತ್ತಿದ್ದರು. ಹೀಗಾಗಿ ಮಹಿಳಾ ಪತ್ರಿಕೆಗಳೂ ಈ ವಿಷಯಕ್ಕೆ ಒತ್ತು ನೀಡುತ್ತಿದ್ದವು. ಆದರೂ ಅವು ಸುಧಾರಣಾ ಚಟುವಟಿಕೆಗಳನ್ನು ಮರೆತಿರಲಿಲ್ಲ.

ಆಂಧ್ರದಲ್ಲಿ ಸುಧಾರಣಾ ಚಳುವಳಿಯು ಅತ್ಯಂತ ತೀವ್ರ ಹಂತ ಮುಟ್ಟಿದ ಸಂದರ್ಭಕ್ಕೆ ಮಹಿಳಾ ಪತ್ರಿಕೋದ್ಯಮದ ಆರಂಭ ಕಾಲ. (1883–1919) ಪೂರಕವಾದಂತಿದೆ. ಸಾಮಾಜಿಕ ಚಳವಳಿ, ಮುಖ್ಯವಾಗಿ ಮಹಿಳಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನದಲ್ಲಿ ಪತ್ರಿಕೆಗಳ ಮಹತ್ತರ ಪಾತ್ರ ಹಾಗೂ ಅವುಗಳ ಯಶಸ್ಸನ್ನು ಅದು ಸಾರುತ್ತದೆ. ಸುಧಾರಣಾವಾದಿಗಳ ಯಶಸ್ವಿ ಪ್ರಯತ್ನದ ಫಲವಾಗಿ ಮಹಿಳಾ ಪತ್ರಿಕೆಗಳನ್ನು ಪರಿಗಣಿಸಿದರೆ, ಪತ್ರಿಕೆಗಳು ಅವರ ಆದರ್ಶ, ಅಭಿಪ್ರಾಯಗಳನ್ನು ಬಿಂಬಿಸುವ ಪ್ರಭಾವಶಾಲಿ ಮಾಧ್ಯಮವಾಯಿತೆಂದೇ ಹೇಳಬಹುದು. ಮಹಿಳಾ ಪತ್ರಿಕೆಗಳ ಉಗಮವು ಸುಧಾರಣಾ ಚಳುವಳಿಗೆ ಪ್ರಮುಖ ಕೊಡುಗೆಯಾಗಿದೆ. ಅಲ್ಲದೆ, ಈ ಸಂದರ್ಭದಲ್ಲಿಯೇ ಮಹಿಳಾ ಅಭಿವೃದ್ಧಿ ಕಾರ್ಯಗಳು ಗಮನಾರ್ಹವಾಗಿ ನಡೆದಿವೆ. ದಾನಿಗಳ ಕೊಡುಗೆಯಿಂದ ಬಾಲಕೀಯರ ಶಾಲೆಗಳ ಆರಂಭ, ಉಪನ್ಯಾಸ, ಸಮ್ಮೇಳನಾ ಹಾಗೂ ಸಂಘ–ಸಂಸ್ಥೆಗಳ ರಚನೆ, ಇವೇ ಮುಂತಾದವು ಈ ಕಾಲದಲ್ಲಿಯೇ ಹೆಚ್ಚಾದವು. ಪ್ರಥಮ ಅಖಿಲಾ ಆಂಧ್ರ ಮಹಿಳಾ ಸಮ್ಮೇಳನ 1910ರಲ್ಲಿ ಗುಂಟೂರಿನಲ್ಲಿ ನಡೆಯಿತು. 'ಸಾವಿತ್ರಿ' ಸಂಪಾದಕಿ ಲಕ್ಷ್ಮೀನರಸಮಾಂಬ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಮಹಿಳೆಯರ ವಿಭಿನ್ನ ಅರಿವು ಉಂಟುಮಾಡುವುದು ಈ ಪತ್ರಿಕೆಗಳ ಪರಮ ಉದ್ದೇಶವಾಗಿರೂ ಸ್ತ್ರೀ, ಪುರುಷರು ಸಂಪಾದಕರಾಗಿದ್ದ ಪತ್ರಿಕೆಗಳಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸ ಕಾಣಬಹುದು. ಪುರುಷರು ಸಂಪಾದಕರಾಗಿದ್ದ ಪತ್ರಿಕೆಗಳ ಧ್ವನಿ ಆದೇಶ ಹಾಗೂ ಅಪ್ಪಣೆ ಕೊಡಿಸುವಂತಹುದಾಗಿದ್ದರೆ ಮಹಿಳಾ ಸಂಪಾದಕರಿದ್ದ ಪತ್ರಿಕೆಗಳು ಮಹಿಳೆಯರ ಸರಿಯಾದ ಸ್ಥಾನದ ಬಗೆಗೆ ವಿವೇಚನಾಯುತವಾಗಿ ಬೆಂಬಲ ನೀಡುತ್ತಿದ್ದವು. ಆದರೆ ಅವರ ಅಭಿಪ್ರಾಯ ಮಂಡನೆ ಹೆಚ್ಚು ಸಮರ್ಥನೀಯವಾಗಿರುತ್ತಿರಲಿಲ್ಲ. ಮಹಿಳೆಯರು ಎದುರಿಸುವ ಸಮಸ್ಯೆ ಬಗಗೆ ಪುರುಷ ಸಂಪಾದಕರಿದ್ದ ಪತ್ರಿಕೆಗಳು ಹೆಚ್ಚು ಗಮನ ಹರಿಸಿರಲಿಲ್ಲ. ನಡತೆ, ಗೃಹಕೃತ್ಯ, ಇವೇ ಮುಂತಾದವು ಅವರಿಗೆ ಪ್ರಮುಖ ವಿಷಯಗಳಾಗಿದ್ದವು. ಆದರೆ ಮಹಿಳೆಯರು ಸಂಪಾದಕರಾಗಿದ್ದ ಪತ್ರಿಕೆಗಳ ಆಶಯವೇ ಬೇರೆ. ಬಾಲ್ಯ ವಿವಾಹ, ವಿಧವೆಯರ ಸ್ಥಿತಿ ಗತಿ, ಮಕ್ಕಳಿಗೆ ಕಲಿಸಲು ಶಿಕ್ಷಕಿಯರ ಅಗತ್ಯ, ಮಗು ಜನನ, ಮಗು ಪಾಲನೆ ಇವೇ ಮುಂತಾದವುಗಳ ಚರ್ಚೆಗೆ ಅವು ವೇದಿಕೆಯಾಗಿದ್ದವು. ಮಹಿಳೆಯರು, ಅಮಾಯಕರು, ಮೂಢನಂಬಿಕೆ ಉಳ್ಳವರು. ಹೀಗಾಗಿ ಅವರಲ್ಲಿ ಸುಧಾರಣೆ ಅಗತ್ಯವಿದೆ. ಅವರಿಗೆ ಶಿಕ್ಷಣ ಬೇಕು ಎಂದು ಪುರುಷರು ಸಂಪಾದಕರಾಗಿದ್ದ ಪತ್ರಿಕೆಗಳ ಅಭಿಪ್ರಾಯವಾಗಿತ್ತು. ಆದರೆ ಮಹಿಳಾ ಸಂಪಾದಕತ್ವದ ಪತ್ರಿಕೆಗಳು ಆ ಅಭಿಪ್ರಾಯವನ್ನು ಒಪ್ಪುತ್ತಿರಲಿಲ್ಲ. ಮಹಿಳೆಯರು ಅಬಲೆಯರು, ಶೋಷಣೆಗೆ ಒಳಗಾಗಿರುವರು, ಆದುದರಿಂದ ಸ್ವಾತಂತ್ರ್ಯ ಬೇಕೆಂದು ವಾದಿಸುವ ಹಾಗೂ ಶೋಷಣೆಯನ್ನು ಪ್ರತಿರೋಧಿಸುವ ಅಗತ್ಯವಿದೆ ಎಂಬುದು ಈ ಪತ್ರಿಕೆಗಳ ವಾದ. ಆದರೂ ಲೇಖನಗಳಲ್ಲಿ ಸಮರ್ಥನೀಯ

ಧ್ವನಿ ಇರಲಿಲ್ಲ. ಬಹುಶಃ ಸಾರ್ವಜನಿಕ ಜಗತ್ತು ಹಾಗೂ ಪತ್ರಿಕೋದ್ಯಮ ತೀರಾ ಹೊಸತೆಂಬುದೇ ಅವರ 'ಲಜ್ಜೆ'ಗೆ ಕಾರಣವಿರಬಹುದು.

ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳ ಬಗೆಗೆ ಬರೆಯುವಾಗ ಈ ಪತ್ರಿಕೆಗಳು ಕನ್ಯಾಶುಲ್ಕ, ಬಾಲ್ಯ ವಿವಾಹ, ವಿಧವಾ ವಿವಾಹ ನಿಷೇಧ, ಮರುವಿವಾಹ ದಂಥ ಸಾಮಾಜಿಕ ಪಿಡುಗನ್ನು ಖಂಡಿಸುವಂತೆಯೇ ಖಂಡಿಸಿ ಬರೆಯುತ್ತಿದ್ದವು. ಮಹಿಳಾ ಶಿಕ್ಷಣವೆಂದರೆ ಕಲಿಕೆಯೊಂದೇ ಎಂದು ಅವು ಭಾವಿಸಿರಲಿಲ್ಲ. ಹೊಲಿಗೆ, ನಿಟ್ಟಿಂಗ್, ಮನೆ ವ್ಯವಹಾರ, ಸಂಗೀತ, ಚಿತ್ರ ಕಲಿಕೆ ಇವುಗಳಿಗೆ ಪತ್ರಿಕೆಗಳು ಒತ್ತು ಕೊಟ್ಟಿದ್ದವು. ಸಮಾಜದಲ್ಲಿ ಸುಸಂಸ್ಕೃತ ಹಾಗೂ ಸ್ವಾತಂತ್ರ್ಯ ಮಹಿಳಾ ಅಸ್ತಿತ್ವದ ಬೆಳವಣಿಗೆಗೆ ಅನುವಾಗುವ ಪ್ರಗತಿದಾಯಕ ಮಾರ್ಗವನ್ನು ಅವು ಬಿಂಬಿಸುತ್ತಿದ್ದವೆಂಬುದರಲ್ಲಿ ಸಂಶಯ ವಿಲ್ಲ. ಇತಿಹಾಸ ಮತ್ತು ಸಾಮಾನ್ಯ ಸಾಹಿತ್ಯ ಅಭ್ಯಾಸ ಅಗತ್ಯವೆಂದು ಹೇಳುವಾಗ ಮಹಿಳೆಯರ ಒಟ್ಟಾರೆ ವ್ಯಕ್ತಿತ್ವದ ಬೆಳವಣಿಗೆಯೇ ಅವುಗಳಿಗೆ ಮುಖ್ಯವಾಗಿತ್ತು. ಹರಟೆ ಬಿಟ್ಟು ಸುಸಂಸ್ಕೃತ ಹಾಗೂ ಆಧುನಿಕ ವಿಚಾರ ಧಾರೆ ಹೊಂದಿದ ಮಹಿಳೆ ರೂಪುಗೊಳ್ಳಲಿ ಎಂಬುದು ಅವುಗಳ ಅಭಿಮತವಾಗಿತ್ತು. ಸಮಾಜದಲ್ಲಿ ಸಮಾನ ಪಾತ್ರ ನಿರ್ವಹಿಸಲೆಂಬುದು ಆಶಯವಾಗಿತ್ತು.

ಮಹಿಳಾ ಪತ್ರಿಕೆಗಳು ತಮ್ಮದೇ ಸಂಕಷ್ಟಗಳನ್ನೂ ಎದುರಿಸುತ್ತಿದ್ದವು—ಸೀಮಿತ ಪ್ರಸರಣ, ಹಣಕಾಸು ಮುಗ್ಗಟ್ಟು ಮತ್ತು ಮುದ್ರಣಕ್ಕೆ ಪುರುಷರ ಮೇಲೆ ಅವಲಂಬನೆ. ಆದರೂ ಪತ್ರಿಕೆ ಪ್ರಕಟಣೆಗೆ ಈ ಆತಂಕ ಗಳು ಅಡ್ಡಿ ಉಂಟುಮಾಡಲಿಲ್ಲ. ಬದಲಿಗೆ ಸಾಮಾಜಿಕ ಪಿಡುಗಿನ ವಿರುದ್ಧ ನಿರಂತರ ಸಮರ ನಡೆಸಿದವು. ಭಾರತದ ಸಮಾಜವು ಬದಲಾಗುತ್ತಿದ ಸಂದರ್ಭದಲ್ಲಿ ಮಹಿಳೆಯರಲ್ಲಿ ಅರಿವು ಉಂಟು ಮಾಡಲು ಶತ ಪ್ರಯತ್ನ ಮಾಡಿದವು. ಒಟ್ಟಾರೆ ಮಹಿಳೆಯರ ಪ್ರಜ್ಞೆ ಮೇಲೆ ಮಹಿಳಾ ಪತ್ರಿಕೆಗಳ ಪ್ರಭಾವ ಅಪಾರ. ಅವು ವಿವೇಚನಾ ಪೂರ್ಣ ಕೂಡ ಆಗಿತ್ತು.

ಸ್ಪಂದನ

ಕೋಮು ಸೌಹಾರ್ದ ಹೇಗೆ?

ಅಯೋಧ್ಯೆಯಲ್ಲಿ ಮಸೀದಿ ನಾಶಪಡಿಸಿದ ಕೋಮು ಶಕ್ತಿಗಳ ವಿರುದ್ಧ ಇಡೀ ದೇಶದಲ್ಲಿ ಆಕ್ರೋಶ ವ್ಯಕ್ತ ವಾಗಿದೆ ; ನಾನಾ ಭಾಗಗಳಲ್ಲಿ ಅನೇಕ ಪ್ರದೇಶಗಳು ಹೊತ್ತಿ ಉರಿದ ಘಟನೆಗಳಲ್ಲಿ ಅಮಾಯಕರು ಸತ್ತಿದ್ದಾರೆ. ಇಷ್ಟೆಲ್ಲಾ ಆಗುತ್ತಿದ್ದಾಗ ಎಲ್ಲೆಡೆ ಕೋಮು ಸೌಹಾರ್ದಕ್ಕೆ ಕಳಕಳಿಯ ಮನವಿ ಕೇಳಿ ಬಂದಿತು ; ಕೋಮು ಶಕ್ತಿ ವಿರುದ್ಧ ಜನರು ಸಂಘಟಿತರಾಗಬೇಕೆಂದು ಕರೆ ನೀಡ ಲಾಯಿತು. ಸಂಘಟಿಸುವ ಪ್ರಯತ್ನ ಕೂಡಾ ನಡೆದಿದೆ...ಇವೆಲ್ಲಾ ಸ್ವಾಗತಾರ್ಹ.

ಆದರೆ ಕೋಮು ಸೌಹಾರ್ದ ಮತ್ತು ವಿವಿಧ ಕೋಮಿನವರು ಸ್ನೇಹಪರರಾಗಿ ಬಾಳಲು ಮಾಡ ಬೇಕಾದರೂ ಏನು ? ಒಂದು ಸಭೆಯಲ್ಲಿ ಯಾರೋ ಹೇಳಿದರು. "ನಮ್ಮಲ್ಲಿ ಎಷ್ಟು ಜನರು ಮುಸ್ಲಿಮರ ಮನೆಯಲ್ಲಿ ಊಟಮಾಡಿದ್ದೇವೆ ? ಎಷ್ಟು ಮುಸ್ಲಿಮರು ನಮ್ಮ ಮನೆಯಲ್ಲಿ ಭೋಜನ ಸ್ವೀಕರಿಸಿದ್ದಾರೆ?" ಪರಸ್ಪರರ ಮನೆಯಲ್ಲಿ ಊಟ ಮಾಡುವುದರಿಂದ ಬಾಂಧವ್ಯ ವೃದ್ಧಿ ಸುವುದಾದರೆ ಸಂತೋಷ. ಆದರೆ ಊಟದ ಹೊತ್ತಿ ಗಷ್ಟೇ ಉಳಿದರೆ ಹೇಗೆ ? "ನಾವು ಒಂದೇ ದೇಶದ ಪೌರರು. ನಮ್ಮ ನಿಮ್ಮಲ್ಲಿ ದ್ವೇಷ-ಅಸೂಯೆ ಮಾಡಲೇ ಬಾರದು" ಎಂಬ ಅರಿವು ಪರಸ್ಪರರಲ್ಲಿ ಮೂಡಬೇಕು. ಹಾಗಾಗುವಂತೆ ಎಲ್ಲರೂ ಶ್ರಮಿಸಬೇಕು. ರಾಜಕಾರಣಿ ಗಳ ಸ್ವಾರ್ಥಕ್ಕೆ, ಕೋಮುವಾದಿಗಳ ಆಟಾಟೋಪಕ್ಕೆ ಮತ್ತು ವದಂತಿಗಳಿಗೆ ಯಾರೂ ಬಲಿಯಾಗಬಾರದು. ಅಂಥ ಮನೋಧಾರ್ಢ್ಯ ಬೆಳೆಸಿಕೊಂಡರೆ ಸೌಹಾರ್ದ ಉಂಟಾದೀತು.

— ಗೌರಿ

'ಅಚಲ'ದ ಹೊಸ ವರ್ಷ ಮಾರ್ಚ್‌ಗೆ
ಆರಂಭ. ಚಂದಾ ನವೀಕರಿಸಿ.
ಹೊಸ ಚಂದಾದಾರರನ್ನು ಮಾಡಿ.
ಪತ್ರಿಕೆ ಬೆಳವಣಿಗೆಗೆ ಪ್ರೋತ್ಸಾಹಿಸಿ.

ವಿಚಾರ ವಿನಿಮಯಕ್ಕೆ ವೇದಿಕೆ
ಯಾದ 'ಅಚಲ'ದಲ್ಲಿ ನಿಮ್ಮ ಅಭಿ
ಪ್ರಾಯಗಳನ್ನು ಮಂಡಿಸಿ. ಮುಕ್ತ
ಚರ್ಚೆಗೆ ಅವಕಾಶ ಕಲ್ಪಿಸಿ.

Reg. No. MAG (5) PRC. DECL 036/86-87

BOOK-POST/PERIODICALS

To,

If undelivered please return to :
Jagruthi Mahila Adhyayana Kendra
26, 1st Main Road, Vyalikaval
Bangalore–560 003